ಶಾಸಕರ ಭವನದಲ್ಲೇ ಮುಗಿಸುತ್ತೇನೆ ಎಂದು ಹೇಳಿದಂಥ ಆ ಅಧಿಕಾರಿಯ ಉದ್ಧಟತನವನ್ನು ಸಹಿಸಿಕೊಂಡು ನಾವು ಆಡಳಿತವನ್ನು ನಡೆಸುವುದು ಸಾಧ್ಯವಾಗುವುದಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

6) **ಅಧ್ಯಕ್ಷರ ಅಪ್ಪಣೆ ಮೇರೆಗೆ**

ವಿಷಯ :- ಶಾಸಕರಾದ ಶ್ರೀ ಮಂಜುನಾಥ ಸಿ. ಕುನ್ನೂರ್ ರವರಿಗೆ ಅಸಿಂಸ್ಟೆಂಟ್ ಇಂಜಿನಿಯರ್ ಶ್ರೀ ಭೀಮಪ್ಪರವರಿಂದ ಕೊಲೆ ಬೆದರಿಕೆ.

ಶ್ರೀ ಡಿ. ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಅದೇನೆಂದರೆ, ನಮ್ಮ ಬಗ್ಗೆ ವಿಧಾನ ಸಭೆಯಲ್ಲಿ ಪ್ರಶ್ನೆ ಹಾಕಿ, ಮಾತನಾಡಿದ್ದೇ ಆದರೆ, ಗಲಾಟೆ ಮಾಡಿದ್ದೇ ಆದರೆ ಶಾಸಕರ ಭವನದಲ್ಲೇ ಅವರನ್ನು ಮುಗಿಸುತ್ತೇನೆಂದು ಒಬ್ಬ ಅಧಿಕಾರಿಯಾದವನು ಹೇಳಿರಬೇಕಾದರೆ ಇದು ಬಹಳ ಗಂಭೀರ ವಿಚಾರವಾಗುತ್ತದೆ ತಾವು ಮಾನ್ಯ ಶಾಸಕರ ರಕ್ಷಣೆಗೆ ಬರಬೇಕಾಗುತ್ತದೆ. ಈಗ ಇಲ್ಲಿ ಮಾನ್ಯ ಗೃಹ ಮಂತ್ರಿಗಳು ಇದ್ದಾರೆ. ಮಾನ್ಯ ಸದಸ್ಯರು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದಾರೆ. ಇದರ ಬಗ್ಗೆ ಚಿಂತನೆ ಮಾಡಿ ಮಾನ್ಯ ಸದಸ್ಯರ ರಕ್ಷಣೆಗೆ ತಾವು ಬರಬೇಕಾಗುತ್ತದೆ.

(ಗೊಂದಲ)

ಶ್ರೀ ಕುಂಬ್ಳೆ ಸುಂದರರಾವ್ :- ಅವರನ್ನು ಶಾಸಕರ ಭವನದಲ್ಲಿ ಮುಗಿಸಿದರೆ ನಮ್ಮನ್ನು ಕ್ಷೇತ್ರದಲ್ಲೇ ಮುಗಿಸುತ್ತಿದ್ದಾರೆ. ಸ್ವಲ್ಪ ಸ್ವಲ್ಪವಾಗಿ ಮುಗಿಸುತ್ತಿದ್ದಾರೆ.

(ಗೊಂದಲ)

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್ :- ಮಾನ್ಯ ಉಪಾಧ್ಯಕ್ಷರೆ, ಈರೀತಿ ಅಧಿಕಾರಿಗಳ ವರ್ತನೆ ಮಾಡುವುದಾದರೆ ರೂಲಿಂಗ್ ಪಾರ್ಟಿಯ ಯಾರದ್ದಾದರೂ ಮಂತ್ರಿಗಳ ಅಥವಾ ಬೇರೆಯವರ ಪ್ರಚೋದನೆ ಇದ್ದೇ ಇರಬೇಕೆನಿಸುತ್ತದೆ. ಅಂಥ ಅಧಿಕಾರಿಗಳು ಯಾರೇ ಆಗಿದ್ದರೂ ಅವರ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಬೇಕಾಗುತ್ತದೆ. ಏಕೆಂದರೆ ಇದು ಅತ್ಯಂತ ಗಂಭೀರವಾದ ವಿಚಾರ.

ಶ್ರೀ ಆರಗ ಜ್ಞಾನೇಂದ್ರ :- ಅಲ್ಲಿ ಇಂಜಿನಿಯರನ್ನು ನೇಮಕ ಮಾಡಿದ್ದೀರೋ ಅಥವಾ ಒಬ್ಬ ರೌಡಿಯನ್ನು ನೇಮಕ ಮಾಡಿದ್ದೀರೋ ಎಂಬುದು ನಮಗೆ ಅರ್ಥವಾಗುವುದಿಲ್ಲ.

ಶ್ರೀ ಸಿ. ಎಂ. ಉದಾಸಿ :- ಮಾನ್ಯ ಸದಸ್ಯರು ಮಾಡಿರುವಂಥ ಆರೋಪ ಬಹಳ ಗಂಭೀರವಾದ ಆರೋಪ. ಆದರೆ ಅವರು ಇವತ್ತು ಯಾರು ಆ ಅಧಿಕಾರಿ ಎಂದು ಅವರ ಹೆಸರನ್ನು ಹೇಳಲಿಲ್ಲ.

ಉಪಾಧ್ಯಕ್ಷರು :- ಹೆಸರು ಹೇಳಿದ್ದಾರೆ. ಜಿಲ್ಲಾ ಪರಿಷತ್ತಿನ ಎ.ಇ.ಇ. ಶ್ರೀ ಭೀಮಪ್ಪನವರು ಎಂದು ಹೇಳಿದ್ದಾರೆ.

ಶ್ರೀ ಕುನ್ನೂರು ಸಿ. ಮಂಜುನಾಥ್ :- ಭೀಮಪ್ಪನವರು ಎಂಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್; ಅವರ ಅಣ್ಣನಾದ ಡಾ: ಬಿ. ಎಸ್. ವೀರಪ್ಪಣ್ಣನವರು ರಾಜ್ಯದ ಜನತಾ ದಳದ ಉಪಾಧ್ಯಕ್ಷರಾಗಿದ್ದಾರೆ. ಆ ಕಾರಣದಿಂದ ಅವರು ನಮ್ಮ ಪಕ್ಷದ ಕಾರ್ಯಕರ್ತರಾದಂಥ ಮತ್ತು ಕಂಟ್ರಾಕ್ಟರ್ ಆದಂತ ವಿ. ಡಿ. ರಾಯಣ್ಣ ಅವರ ಎದುರಿಗೆ ಈ ರೀತಿ ನೇರವಾಗಿ ಆರೋಪ ನನ್ನ ಮೇಲೆ ಮಾಡಿದ್ದಾರೆ.

ಶ್ರೀ ಸಿ. ಎಂ. ಉದಾಸಿ :- ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ನಾವು ಜಿ.ಡಿ.ಸಿ. ಮೀಟಿಂಗ್‌ನಲ್ಲಾಗಲಿ ಮತ್ತೆ ಯಾವ ಸಭೆಗಳಲ್ಲಾಗಲಿ ಇಂಥ ಆರೋಪಗಳನ್ನು ಯಾವಾಗಲೂ ಅವರು ಮಾಡಲಿಲ್ಲ. ಇವತ್ತು ಮೊದಲ ಸಾರಿ ಈ ಸಭೆಯಲ್ಲಿ ನಮ್ಮ ಗಮನಕ್ಕೆ ತರುತ್ತಿದ್ದಾರೆ. ಲಿಖಿತವಾಗಿ ಅವರು ಇವತ್ತು ಏನು ದೂರು ಕೊಡಬೇಕಾಗಿಲ್ಲ. ನಾವು ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇಲ್ಲಿ ಅವರು ಏನು ಹೇಳುತ್ತಾರೆ ನಿಮ್ಮ ಪಕ್ಷದ ಕಾರ್ಯಕರ್ತನ ಸಹೋದರ ಎಂಬ ಕಾರಣದಿಂದ ಎನ್ನುವ ಮಾತನ್ನು ಹೇಳಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಎದುರು ಆರೋಪ ಈ ರೀತಿ ಬರಬಹುದು. ಏಕೆಂದರೆ ಇವರು ಬರೀ ಒಬ್ಬ ಜನತಾ ದಳದ ಸಹೋದರ ಎಂಬ ಸಲುವಾಗಿ ಕಾಂಗ್ರೆಸ್‌ನವರು ಆರೋಪ ಮಾಡುತ್ತಿದ್ದಾರೆ ಎಂಬ ಮಾತು ಬರಬಾರದು. ಅಧಿಕಾರಿಯಾದವನು ತಾನು ಮಾಡಬೇಕಾದ ಕೆಲಸ ಮಾಡಬೇಕೇ ಹೊರತು, ಅಧಿಕಾರಿ ಯಾರ ಸಂಬಂಧಿಕ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳುವುದಕ್ಕೆ ಹೋಗುವುದಿಲ್ಲ. ನ್ಯಾಯವಾಗಿ ಅಲ್ಲಿ ಕೆಲಸ ಮಾಡುತ್ತಾ ಇರದಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್ :- ಒಬ್ಬ ಶಾಸಕರ ಮೇಲೆ ಈ ರೀತಿ ಮಾತನಾಡಿದರೆ ಸಸ್ಪೆಂಡ್ ಮಾಡುತ್ತೇವೆಂದು ಹೇಳಿ. ಸೂಕ್ತ ಕ್ರಮ ಏನು? ಯಾವಾಗಲೂ ಹೇಳುತ್ತಿರುತ್ತಾನೆ, ಸೂಕ್ತ ಕ್ರಮ, ಪರಿಶೀಲಿಸುತ್ತೇವೆ, ಎಂದು ಇದು ನಡೆಯುತ್ತಲೇ ಇರುತ್ತದೆ.

ಉಪಾಧ್ಯಕ್ಷರು :- ಅವರು ಸ್ಪಷ್ಟವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ, ಈಗ ಸಮಯ ಇಲ್ಲ. ಇವತ್ತು ಬೇಡಿಕೆ ಮೇಲೆ ಮಾತನಾಡುವುದು ಮುಗಿಯಬೇಕು.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್ :- ಕ್ರಮ ಎಂದರೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಸಾಕಷ್ಟು ಜನ ಸದಸ್ಯರು ಇವತ್ತು ಹೇಳಿದಾಗ್ಯೂ ಕೂಡ ಅಂಥ ಯಾವ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಅಧಿಕಾರಿಗಳನ್ನು ಪ್ರೋತ್ಸಾಹಿಸುವಂಥ ಕ್ರಮ ಸರ್ಕಾರದಲ್ಲಿ ನಡೆದಿದೆ. ಇದಕ್ಕೆ ಬೇಕಾದರೆ ನಾನು ದಾಖಲೆ ಸಮೇತ ಕೊಡುತ್ತೇನೆ.

ಉಪಾಧ್ಯಕ್ಷರು :- ಅವರು ಮುಗಿಸಲಿ ಬಿಡಿ. ತಾವು ಏತಕ್ಕೆ ಎಳುತ್ತೀರಿ?

(ಗೊಂದಲ)

ಈ ತರಹ ಎದ್ದು ನಿಂತರೆ ಸದನ ನಡೆಸುವುಕ್ಕಾಗುವುದಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ. ಒಬ್ಬರೇ ಮಾತನಾಡಬೇಕು. ಎಲ್ಲರೂ ಮಾತನಾಡಿದರೆ ಹೇಗೆ?

ಶ್ರೀ ಕುನ್ನೂರು ಸಿ. ಮಂಜುನಾಥ್ :- ಅಧಿಕಾರಿಯ ಹೆಸರನ್ನು ನೇರವಾಗಿ ಹೇಳಲಿಲ್ಲವೆಂದರು; ನಾನು ಹೇಳಿದ್ದೇನೆ. ಮಾನ್ಯ ಸಚಿವರಿಗೂ ಕೂಡ ಆ ಅಧಿಕಾರಿ ಆ ಸ್ಥಳದಲ್ಲೇ ಇರಬಾರದು ವರ್ಗಾವಣೆ ಮಾಡಿ, ಯಾರನ್ನಾದರೂ ಹಾಕಿ ಅವರನ್ನು ಅಲ್ಲಿ ಇಡಬಾರದು ಎಂದು ಹೇಳಿ ಪತ್ರ ಕೊಟ್ಟೆ. ಆಗ ಅವರೇ ನನಗೆ ಹೇಳಿದರು, ಆ ಅಧಿಕಾರಿ ಸುಮಾರಾಗಿ ಇದ್ದಾನೆಂದು ಕೇಳಿದ್ದೇನೆ ಎಂಬ ಮಾತನ್ನು ಇದೇ ಸದನದಲ್ಲಿ ಅವತ್ತು ನನಗೆ ಹೇಳಿದರು. ನಾನು ಅಲ್ಲಿ ಕುಳಿತಾಗ ನನ್ನ ಎದುರಿಗೆ ಅವರು ಈ ಮಾತನ್ನು ಹೇಳಿದ್ದರು. ಅದು ಏನೇ ಇರಲಿ. ತಮಗೂ ಕೂಡ ಗೊತ್ತಿದೆ, ಶ್ರೀಮಾನ್ ಭೀಮಪ್ಪನವರು ಎಂಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಸವದತ್ತಿಯಲ್ಲಿ ಕೆಲಸಮಾಡಿದ್ದಾರೆಂದು ಕೇಳಿದ್ದೇನೆ.

ಉಪಾಧ್ಯಕ್ಷರು :- ಇಲ್ಲ, ಇಲ್ಲ, ಇಲ್ಲ, ನಮ್ಮಲ್ಲಿ ಏನು ಅವರು ಕೆಲಸ ಮಾಡಿಲ್ಲ. ನನಗೆ ಅಂತ ಪರಿಚಯವು ಇಲ್ಲ.....

(ಗೊಂದಲ)

ಶಿವಕುಮಾರ್ ಅವರೆ ತಾವು ಕುಳಿತುಕೊಳ್ಳಿ. ಜಿಲ್ಲಾ ಮಂತ್ರಿಗಳಾದ ಶ್ರೀ ಎಸ್. ಎಸ್. ಪಾಟೀಲರು ಉತ್ತರ ಹೇಳುತ್ತಾರೆ ಕೇಳಿ.

ಶ್ರೀ ಎಸ್. ಎಸ್. ಪಾಟೀಲ್ :- ಈ ಬಗ್ಗೆ ಅವರಿಗೆ ಅಂದರೂ ಅಷ್ಟೇ, ನಮಗೆ ಅಂದರೂ ಅಷ್ಟೆ. ನಾವು ಮೊನ್ನೇ ರಿವ್ಯೂನಲ್ಲಿ ಕೂಡಿದ್ದೇವೆ ಆಗ ಈ ಸುದ್ದಿ ಇಲ್ಲ. ಇವತ್ತು ಹೇಳುತ್ತಿದ್ದಾರೆ, ಇದನ್ನು ಸೀರಿಯಸ್ ಆಗಿ ತೆಗೆದುಕೊಂಡು ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು :- ಆ ಇಂಜಿನಿಯರನ್ನು ಸಸ್ಪೆಂಡ್‌ನಲ್ಲಿಟ್ಟು ಎನ್‌ಕ್ವೈರಿ ಮಾಡಿ.

ಶ್ರೀ ವಾಟಾಳ್ ನಾಗರಾಜ್ :- ಇದರಲ್ಲಿ ಶ್ರೀ ಕುನ್ನೂರು ಅವರು ಮಾತನಾಡುವಾಗ ಬಹಳ ನೊಂದು ಹೇಳುತ್ತಿದ್ದಾರೆ, ಈ ಪ್ರಶ್ನೆಯನ್ನು ಶಾಸನಸಭೆಯಲ್ಲಿ ಎತ್ತಿದರೆ ನಿನ್ನನ್ನು ಮುಗಿಸುತ್ತೇನೆಂದು....

(ಗೊಂದಲ)

ಇದು ಇತ್ಯರ್ಥ ಆಗಬೇಕು. ಆ ಅಧಿಕಾರಿ ಯಾರೇ ಇರಲಿ, ಮೊದಲು ಹೇಳಿರತಕ್ಕ ಪದ ಇದೆಯಲ್ಲ ಆ ಪದ ಭಯೋತ್ಪಾದನೆ ಭಯವನ್ನು ಹುಟ್ಟಿಸತಕ್ಕದ್ದು. ನಾಳೆ

ಏನು ಬೇಕಾದರೂ ಆಗಬಹುದು. ನೀವು ನನಗೆ ಏನು ರಕ್ಷಣೆ ಕೊಟ್ಟಿದ್ದೀರಿ? ಈ ಕ್ಷಣದಲ್ಲಿ ಈ ಸದನದಲ್ಲಿ ಅವನನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳಬೇಕು. ಇದನ್ನು ಯಾವ ಕಾರಣಕ್ಕೂ ಬಿಡುವುದಕ್ಕೆ ಸಾಧ್ಯವಿಲ್ಲ. ಇದೇನು ಹುಡುಗಾಟವೇ?

ಶ್ರೀ ಎಂ. ಶ್ರೀನಿವಾಸ್ :- ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದು ಅಲ್ಲ. ಇದು ಬಹಳ ಮಹತ್ವದ ಪ್ರಶ್ನೆ. ಒಬ್ಬ ಶಾಸಕರನ್ನು ಮುಗಿಸುತ್ತೇನೆಂದು ಹೇಳುವ ಆ ಅಧಿಕಾರಿಯನ್ನು ಈಗಲೇ ಸಸ್ಪೆಂಡ್ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ :- ನಾವು ಧರಣಿ ಮಾಡುತ್ತೇವೆ.

(ಶ್ರೀ ವಾಟಾಳ್ ನಾಗರಾಜ್‌ರವರು ಧರಣಿಗೆ ಬಂದರು)

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ :- ಒಬ್ಬ ಶಾಸಕರ ಮಾತನ್ನು ನಂಬುವುದಿಲ್ಲವೆಂದರೆ ಇನ್ನು ಯಾರ ಮಾತನ್ನು ನಂಬುತ್ತೀರಿ? ಆದಾದರೂ ಗೊತ್ತಾಗಲಿ ನಮಗೆ.

ಉಪಾಧ್ಯಕ್ಷರು :- ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಿಂಧ್ಯ ಅವರು ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ ಕೇಳಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಧರಣಿಗಿಳಿದರು)

ಶ್ರೀ ಹೆಚ್. ಡಿ. ಬಸವರಾಜ್ :- ಅಧಿಕಾರಿಗಳು ಶಾಸಕರನ್ನು ಇಷ್ಟು ಕೀಳು ಮಟ್ಟದಲ್ಲಿ ನಡೆಸಿಕೊಳ್ಳುತ್ತಿದ್ದಾರೆಂದರೆ ಇದರ ಅರ್ಥವೇನು? ಈ ತಿಂಗಳ ಎರಡನೇ ತಾರೀಖು ಕಾರ್ಯನಿರ್ವಾಹಕ ಅಧಿಕಾರಿಗಳು ಶಾಸಕರನ್ನು ನಾನು ನೋಡುವುದಿಲ್ಲ, ಅವರು ಏನು ಮಾಡಿಕೊಳ್ಳುತ್ತಾರೆ ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ ನಾನು ಹೇಳಿ ಕಳುಹಿಸಿದರೂ ಅವರು ಬರಲಿಲ್ಲ. 20 ಅಂಶಗಳ ಕಾರ್ಯಕ್ರಮಕ್ಕೆ ನಾನು ಅಧ್ಯಕ್ಷ ನಾಗಿದ್ದೇನೆ, ಅವರು ಕಾರ್ಯದರ್ಶಿಯಾಗಿದ್ದಾರೆ. 20 ಅಂಶಗಳ ಕಾರ್ಯಕ್ರಮದ ಬಗ್ಗೆ ನಾನು ಚರ್ಚೆ ಮಾಡಬೇಕೆಂದು ಹೇಳಿದರೂ ಅವರು ಬರುತ್ತಿಲ್ಲ. ಇಷ್ಟರಮಟ್ಟಿಗೆ ಉದ್ದಟತನಕ್ಕೆ ಯಾರು ಪ್ರಚೋದನೆ ಮಾಡಿತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಈ ಉದ್ದಟತನಕ್ಕೆ ಅಂಕಿತ ಹಾಕಲೇಬೇಕಾಗಿದೆ. ಇಲ್ಲದಿದ್ದರೆ ನಾವು ಈ ಶಾಸನಸಭೆಯಲ್ಲಿ ಶಾಸಕರಾಗಿ ಸರ್ಕಾರದ ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಅವರ ಬಗ್ಗೆ ಎಲ್ಲಿಯವರೆಗೆ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಲ್ಲಿಯವರೆಗೆ ನಾವು ಧರಣಿ ಮಾಡುತ್ತೇವೆ.

ಉಪಾಧ್ಯಕ್ಷರು :- ತಾವು ಕುಳಿತುಕೊಳ್ಳಿ. ಸಿಂಧ್ಯ ಅವರೆ ತಾವು ಮಾತನಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ.....

ಶ್ರೀ ಜೆ. ಎ. ಶ್ರೀ ರಾಮರೆಡ್ಡಿ :- ಶಾಸಕರು ಹೇಳುವುದನ್ನು ನಂಬುವು ದಿಲ್ಲವೆಂದರೆ ಹೇಗೆ? ಪರಿಶೀಲನೆ ಮಾಡುತ್ತೇವೆಂದು ಏನು ಹೇಳುವುದು? ಶಾಸಕರ ಮಾತಿಗೆ ಬೆಲೆ ಈ ಸದನದಲ್ಲಿ ಬೆಲೆ ಇಲ್ಲವೇ? ನಿಮ್ಮ ಅಧಿಕಾರಿಗಳು ಮತ್ತು ಸರ್ಕಾರ ಹೇಳಿದ್ದಕ್ಕೆ ಮಾತ್ರ ಬೆಲೆ ಇದೆಯೇ? ಶಾಸಕರು ಸುಳ್ಳು ಹೇಳುತ್ತಿದ್ದಾರೆಂದು ಅರ್ಥ ವಾಗುತ್ತದೆ ಅಲ್ಲಿಗೆ.

ಉಪಾಧ್ಯಕ್ಷರು :- ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಜೆ. ಎ. ಶ್ರೀ ರಾಮರೆಡ್ಡಿ :- ಅವರು ಹೇಳಿದ್ದನ್ನು ನಾವು ಕೇಳು ತ್ತಿದ್ದೇವೆ. ಕ್ರಮ ಕೈಗೊಳ್ಳುತ್ತೇವೆ, ಪರಿಶೀಲನೆ ಮಾಡುತ್ತೇವೆ, ಸೂಕ್ತ ಕ್ರಮ ಎಂದು.

ಶ್ರೀ ವಾಟಾಳ್ ನಾಗರಾಜ್ :- ಈ ಶಾಸನಸಭೆಯಲ್ಲಿ ಜವಾಬ್ದಾರಿಯುತವಾಗಿ ಒಬ್ಬ ಶಾಸಕರು, ತನ್ನ ಮೇಲೆ ಹೆದರಿಸಿ ಬೆದರಿಸಿ ಶಾಸನಸಭೆಯಲ್ಲಿ ವಿಷಯ ಪ್ರಸ್ತಾಪ ಮಾಡಿದರೆ ನಿನ್ನನ್ನು ಮುಗಿಸುತ್ತೇನೆಂಬ ಪದ ಇದೆಯಲ್ಲ....ಅವರನ್ನು ನೇರವಾಗಿ ಬಂಧಿಸಬೇಕು. ಶಾಸಕರ ಭವನದಲ್ಲಿ ಹೇಳಿರತಕ್ಕ ಮಾತು ಏನಿದೆ....ಮೊದಲು ಬಂಧಿಸಬೇಕು. ಬಂಧಿಸಿ ಅವನ ಮೇಲೆ ಕೊಲೆ ಆಪಾದನೆ ಹಾಕಬೇಕು. ಇದು ಯಾವ ಕಾರಣಕ್ಕೂ ಬಿಡತಕ್ಕದ್ದಲ್ಲ. ಇದು ಎಲ್ಲ ಕ್ಷೇತ್ರಗಳಲ್ಲೂ ನಡೆಯುತ್ತಿದೆ. ನಾನು ಈ ಮಾತನ್ನು ಪಕ್ಷರಹಿತವಾಗಿ ಹೇಳುತ್ತಿದ್ದೇನೆ. ಜನತಾ ದಳ ಆಗಬಹುದು, ಕಮ್ಯುನಿಸ್ಟ್ ಆಗಬಹುದು, ವಾಟಾಳ್ ಪಕ್ಷ ಆಗಬಹುದು, ಕಾಂಗ್ರೋಸ್ ಆಗಬಹುದು, ಬಿಜೆಪಿ ಆಗಬಹುದು. ಎಲ್ಲ ಕ್ಷೇತ್ರಗಳಲ್ಲೂ ಅಧಿಕಾರಿಗಳ ಆಟ್ಟಹಾಸ ನಡೆದಿದೆ. ತಕ್ಷಣ ಈ ಸರ್ಕಾರ ಹೇಳಬೇಕು, ಅವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟಿದ್ದೇವೆಂದು ಹೇಳಬೇಕು. ಈಗಲೇ ಶಿಕ್ಷೆಯನ್ನು ಈ ಸದನದಲ್ಲೇ ವಿಧಿಸಬೇಕೆಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :- ಈಗ ಸಿಂಧ್ಯ ಅವರು ಮಾತನಾಡುತ್ತಾರೆ ಕೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರುಗಳು, ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಖರ್ಗೆಯವರು ದಯವಿಟ್ಟು ಕುಳಿತುಕೊಂಡರೆ ಸರ್ಕಾರದ ನಿಲುವನ್ನು ನಾವು ಹೇಳುವುದಕ್ಕೆ ತಯಾರಿದ್ದೇವೆ. ದಯವಿಟ್ಟು ಕುಳಿತುಕೊಳ್ಳಿ ಸ್ವಾಮಿ. ಸರ್ಕಾರದ ನಿಲುವನ್ನೂ ನೀವು ಕೇಳುವುದಕ್ಕೆ ತಯಾರಿಲ್ಲ ಅಂದರೆ ಹೇಗೆ?

ಉಪಾಧ್ಯಕ್ಷರು :- ಪದೇ ಪದೇ ನಾನು ಏನು ಹೇಳುತ್ತಿದ್ದೇನೆ ವಿರೋಧಪಕ್ಷದ ನಾಯಕರಿಗೆ ಅಂದರೆ ಅವರು ಸರ್ಕಾರದ ಪರವಾಗಿ ಹೇಳುತ್ತಾರೆ ನೀವು ದಯಮಾಡಿ ಕೇಳಿರಿ ಎಂದು. ನೀವು ಒಮ್ಮಿಂದಲೇ ಬಂದು ಇಲ್ಲಿ ವೆಲ್‌ನಲ್ಲಿ ಕುಳಿತುಬಿಟ್ಟರೆ ಹೇಗೆ? ಅವರ ಹೇಳಿಕೆ ಕೇಳದೆಲೇ ನೀವು ಇಲ್ಲಿ ಬಂದು ಕುಳಿತುಬಿಟ್ಟರೆ ಹೇಗೆ? ಸದನ ನಡೆಸುವುದು ಹೇಗೆ? ನೀವು ಅವರ ಹೇಳಿಕೆ ಕೇಳದೆಲೇ ಒಳಕ್ಕೆ ಬಂದರೆ ಹೇಗೆ?

ಶ್ರೀ ಬಿ. ಎಸ್. ಯಡಿಯೂರಪ್ಪ :- ಇದು ಕೇವಲ ಶಾಸಕರಾದ ಕುನ್ನೂರು ಅವರು ಏನು ಮಾತನಾಡಿದರು ಇದೊಂದೇ ಘಟನೆ ಅಲ್ಲ. ಇವತ್ತು ಈ ಸದನದಲ್ಲಿ ರಾಜ್ಯದ ಜನರ ಪರವಾಗಿ ಆ ಕಡೆ ಇರಬಹುದು, ಈ ಕಡೆ ಇರಬಹುದು, ಚುನಾಯಿತ ಪ್ರತಿನಿಧಿಗಳು ಮಾತನಾಡುವಂಥ ಕಾಲದಲ್ಲಿ, ಕೆಲಸ ಮಾಡುವಂಥ ಕಾಲದಲ್ಲಿ, ಜವಾಬ್ದಾರಿ ಇರುವಂಥ ಒಬ್ಬ ಶಾಸಕರಿಗೆ ಈ ರೀತಿ ಶಾಸಕರ ಭವನದ ಕೊಠಡಿಗ ಬಂದು ನಿನ್ನನ್ನು ಮುಗಿಸಿಬಿಡುತ್ತೇನೆ ಎಂದು ಹೇಳುವಂಥ ಉದ್ಧಟತನದ ಮಾತೇನಿದೆ ಇದು ಎಷ್ಟರಮಟ್ಟಿಗೆ ಶೋಭೆ ತರುವಂಥದ್ದು? ಉದಾಹರಣೆಗೆ ನಮ್ಮ ಬಿಜಾಪುರ ಎಂ.ಎಲ್.ಎ. ಬಸವನಗೌಡ ಪಾಟೀಲ್ ಅವರದು. ಏನಾಯಿತು ಸ್ವಾಮಿ? ಅಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದ ಒಬ್ಬ ಎಸ್.ಪಿ. ಅವರ ವಿರುದ್ಧ ಪತ್ರಿಕಾ ಹೇಳಿಕೆ ಕೊಡುವಹಾಗೆ ಆಯಿತು. ಬಸವರಾಜ್ ಅವರ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಆಗಲಿಲ್ಲ. ಆಲ್ಲಿರುವಂಥ ಇ.ಒ. ನಮ್ಮ ಎಗ್ಸಿಕ್ಯುಟೀವ್ ಆಫೀಸರ್ ಅವನು ನಿನ್ನ ಮುಖ ನೋಡುವುದಕ್ಕೆ ರೆಡಿ ಇಲ್ಲ ಎಂದು ಅವರನ್ನು ಭೇಟಿ ಮಾಡುವುದಕ್ಕೂ ಸಿದ್ಧ ಇಲ್ಲ, ಆ ರೀತಿ ಉದ್ಧಟತನದ ವರ್ತನೆಯನ್ನು ಮಾಡಿರುವುದನ್ನು ನೀವು ನೋಡಿದ್ದೀರಿ. ಇಲ್ಲಿ ಯಾರೋ ಒಬ್ಬ, ನಮ್ಮ ಶಾಸಕ ಮಂಜುನಾಥ್ ಕುನ್ನೂರ್ ಅವರಿಗೆ ಹೇಳಿರುವ ಸ್ಥಿತಿ ನಾವು ನೋಡಿದ್ದೇವೆ ಅಪ್ಪಚ್ಚು ರಂಜನ್‌ಅವರ ಘಟನೆಗಳನ್ನು ನಾವು ನೋಡಿದ್ದೇವೆ ಯಾವ ಪರಿಸ್ಥಿತಿ ಬಂದಿದೆ ಅಂತ ಹೇಳಿ. ಜಯರಾಮಶೆಟ್ಟಿ ಅವರು ಇಲ್ಲಿ ಕಣ್ಣೀರು ಹಾಕುವ ಪರಿಸ್ಥಿತಿ ಬಂತು. ಯಾವ ಸಬ್-ಇನ್‌ಸ್ಪೆಕ್ಟರನ್ನು ಟ್ರಾನ್ಸ್‌ಫರ್ ಮಾಡಿದ್ದರೋ ಅವನೇ ವಾಪಸ್ ಬಂದು ಅವರ ಮೇಲೆ ಸವಾಲು ಹಾಕಿ ಸುಳ್ಳು ಕೇಸ್ ಹಾಕಿ.... ಸ್ವಾಮಿ ಈ ತರಹ ಗೌರವಾನ್ವಿತ ಸದಸ್ಯರಿಗೆ ಸಂಬಂಧಪಟ್ಟ ಹಾಗೆ 10-12 ಘಟನೆ ಆಗಿವೆ. ಅಲ್ಲಿ ಸರ್ಕಾರ ನಡೆಸುವವರನ್ನು ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕು ಎನ್ನುವ ಉದ್ದೇಶ ಅಲ್ಲ ನಮ್ಮದು. ನಾವು ಹೇಳುತ್ತಿರುವಂಥದ್ದು ನಾವು ನಿಜವಾಗಿಯೂ ಪ್ರಾಮಾಣಿಕವಾಗಿ ಜನರ ಕೆಲಸ ಮಾಡಬೇಕು,ಕಳಕಳಿಯಿಂದ ಕೆಲಸ ಮಾಡಬೇಕು ಎಂದು ಬಂದಿದ್ದೇವೆ, ನಿಮಗೆ ಕಳಕಳಿ ಇದ್ದರೆ ಸರ್ಕಾರಕ್ಕೆ ಈ ರೀತಿ ಉದ್ಧಟತನದಿಂದ ವರ್ತನೆ ಮಾಡುವಂಥ ಅಧಿಕಾರಿಗಳಿಗೆ ನಾವು ಸರಿಯಾದಂಥ ಪಾಠ ಕಲಿಸಬೇಕಾಗುತ್ತದೆ. ಬುದ್ಧಿಕಲಿಸಬೇಕಾಗುತ್ತದೆ. ಕೆಲವರನ್ನು ಸಸ್ಪೆಂಡ್ ಮಾಡ ಬೇಕಾಗುತ್ತದೆ. ಈ ರೀತಿ ನಡೆದುಕೊಳ್ಳಬೇಡಿ ಎಂದು ಅವರಿಗೆ ಛೀಮಾರಿ ಹಾಕ ಬೇಕಾಗುತ್ತದೆ. ಇಲ್ಲದೇ ಇದ್ದರೆ ಇವತ್ತು ಏನು ಬೇಕು ಸ್ವಾಮಿ? ಒಬ್ಬ ಶಾಸಕ ಎದ್ದುನಿಂತುಕೊಂಡು ಕುನ್ನೂರು ಅವರು ಈ ರೀತಿ ಪರಿಸ್ಥಿತಿ ಬಂದಿದೆ ಎಂದು ಹೇಳಿಕೊಂಡಿದ್ದು ರೆಕಾರ್ಡ್‌ಗೆ ಹೋಗಿದೆ. ಇನ್ನೇನು ಬರೆದುಕೊಡಬೇಕಾ? ಆದರ ಅಗತ್ಯ ಇದೆಯಾ? ಇದು ಕೇವಲ ಒಂದಲ್ಲ. ಈ ತರಹ ಅನೇಕ ಘಟನೆಗಳು ಮರುಕಳಿಸುತ್ತಿದೆ. ನಾವು ಇಲ್ಲಿ ಕೆಲಸ ಮಾಡುವುದಕ್ಕೆ ಆಗದೇ ಇರುವಂಥ ಉಸಿರು ಕಟ್ಟುವಂಥ ಒಂದು ಪರಿಸ್ಥಿತಿ ಇವತ್ತು ನಮಗೆ ಬಂದಿದೆ. ಚಿತ್ತರಂಜನ್‌ಅವರು ಹೋದರು ಯಾವುದೋ ಕಾರಣಕ್ಕೆ. ನಾಳೆ ಇವರಿಗೂ ಅದೇ ಸ್ಥಿತಿ ಬಂದರೆ ಆಮೇಲೆ ಚರ್ಚೆ ಮಾಡೋಣವೇ ಸ್ವಾಮಿ?

ಉಪಾಧ್ಯಕ್ಷರು :- ಇಲ್ಲ, ನಾನು ಚರ್ಚೆ ಮಾಡಬಾರದು ಎಂದು ಹೇಳಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಅವರು ಬಾಕು ಚೂರಿ ಹಾಕಿ ಏನಾದರೂ ಆಗಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ಈ ಶಾಸನ ಸಭೆಯಲ್ಲಿ ಒಬ್ಬ ಸದಸ್ಯ ತನ್ನ ಹಕ್ಕನ್ನು ಚಲಾಯಿಸುವಾಗ ಅಲ್ಲಿ ಅವರ ಮತಕ್ಷೇತ್ರದಲ್ಲೇ ಇರಬಹುದು, ಅವರ ಜಿಲ್ಲೆಯಲ್ಲೇ ಇರಬಹುದು, ಒಬ್ಬ ಅಧಿಕಾರಿ ಇವತ್ತು ಶಾಸಕರನ್ನು ನೀವು ವಿಧಾನಸಭೆಯಲ್ಲಿ ನನ್ನ ಬಗ್ಗೆ ಮಾತನಾಡಿದರೆ ಶಾಸಕರ ಭವನದಲ್ಲಿ ನಿಮ್ಮನ್ನು ಮುಗಿಸುತ್ತೇನೆ ಎನ್ನತಕ್ಕಂಥ ಮಟ್ಟಕ್ಕೆ ಅವನು ಹೋಗಬೇಕಾದರೆ ನಾನು ಹೇಳ ಬೇಕಾಗುತ್ತದೆ ಅವನಿಗೆ ಸರ್ಕಾರದ ಕುಮ್ಮಕ್ಕಿರಬೇಕು ಈ ರೀತಿಯಾಗಿ ಹೇಳಬೇಕಾದರೆ, ಅದಿಲ್ಲದೆ ಇಂಥ ಧೈರ್ಯ ಒಬ್ಬ ಅಧಿಕಾರಿಗೆ ಬರುವುದಕ್ಕೆ ಸಾಧ್ಯವಿಲ್ಲ. ಏತಕ್ಕೆ ಆ ರೀತಿಯಾಗಿ ಹೇಳಿದ್ದಾನೆ, ಅದರ ಹಿನ್ನೆಲೆ ಏನು ಏನ್ನುವುದನ್ನೂ ಅವರು ಹೇಳಿದರು. ಅದಕ್ಕಾಗಿ ಆ ಅಧಿಕಾರಿಯನ್ನು ಮೊದಲು ನೀವು ಸಸ್ಪೆಂಡ್ ಮಾಡಿ. ಆಮೇಲೆ ಎನ್‌ಕ್ವೈರಿ ಮಾಡಿ. ಇದರಿಂದ ಏನೂ ಆಕಾಶ ಕಳಚಿ ಬೀಳುವುದಿಲ್ಲ. ಅಥವಾ ಏನೂ ತೊಂದರೆಯೂ ಆಗುವುದಿಲ್ಲ. ಮೊದಲು ನೀವು ಅವನನ್ನು ಸಸ್ಪೆಂಡ್ ಮಾಡಿ. ಆಮೇಲೆ ಎನ್‌ಕ್ವೈರಿ ಮಾಡಿ. ಇದರಿಂದ ಏನೂ ಆಕಾಶ ಕಳಚಿ ಬೀಳುವುದಿಲ್ಲ. ಅಥವಾ ಏನೂ ತೊಂದರೆಯೂ ಆಗುವುದಿಲ್ಲ. ಮೊದಲು ನೀವು ಅವನನ್ನು ಸಸ್ಪೆಂಡ್ ಮಾಡಿ, ಆಮೇಲೆ ಎನ್ ಕ್ವೈರಿ ಮಾಡಿ. ಇವರು ಹೇಳುವಂಥದ್ದು ಸರಿಯಿಲ್ಲ ಅಂತ ನಿಮಗೆ ಅನ್ನಿಸಿದ ಮೇಲೆ ಮತ್ತೆ ರೀಇನ್‌ಸ್ಟೇಟ್ ಮಾಡಿ. ಏಕೆಂದರೆ ಇದು ಒಬ್ಬ ಶಾಸಕರ ಪ್ರಶ್ನೆ ಅಷ್ಟೇ ಅಲ್ಲ. ಇಡೀ ಸದನದ ಘನತೆ ಗೌರವದ ಪ್ರಶ್ನೆ. ಇಲ್ಲದಿದ್ದರೆ ನಾಳೆ ಯಾರೂ ಕೂಡ ಫ್ರೀಯಾಗಿ ಫ್ರಾಂಕಾಗಿ ತಮ್ಮ ವಿಚಾರಗಳನ್ನು ಇಲ್ಲಿ ಪ್ರತಿಪಾದನೆ ಮಾಡುವುದಕ್ಕೆ ಅಥವಾ ಸದನದ ಮುಂದೆ ಇಡುವುದಕ್ಕೆ ಹಿಂದುಮುಂದು ಜರಿಯ ಬೇಕಾಗುತ್ತದೆ. ಇವತ್ತು ಡಾಕ್ಟರ್ ಚಿತ್ತರಂಜನ್ ಗತಿ ಅದೇರೀತಿಯಾಗಿ ಆಯಿತು. ಜಯರಾಮ ಶೆಟ್ಟಿ, ಬಸವರಾಜ್ ಇನ್ನೂ ಅನೇಕ ಜನ ಶಾಸಕರು..... ಇವತ್ತಿನ ದಿವಸ ನೀವು ಅಧಿಕಾರಿಗಳಿಗೆ ಇಷ್ಟು ಸಾರ್ವಭೌಮತ್ವವನ್ನು ಕೊಟ್ಟು ಅವರದೇ ಸುಪ್ರೀಮೆಸಿ ಎಂದು ತಿಳಿದುಕೊಂಡು ಅವರನ್ನು ಡಿಫೆಂಡ್ ಮಾಡುವುದಕ್ಕೆ ಮಂತ್ರಿಗಳು ಹೊರಟರೆ ನಾವು ಎಲ್ಲಿ ಈ ಮಾತನ್ನು ಹೇಳಬೇಕು? ಇಲ್ಲೇ ನಿಮ್ಮ ರಕ್ಷಣೆಯನ್ನು ಕೇಳಬೇಕು ನಾವು. ಹೊರಗಡೆ ಅವರು ರಕ್ಷಣೆ ಕೊಡುವುದಿಲ್ಲ. ಹೊರಗಡೆ ಅವರು ನಮ್ಮ ಮಾತು ಕೇಳುವುದಿಲ್ಲ. ಅಂದಾಗ ಈ ಸದನದ ಸದಸ್ಯರು ತಮ್ಮ ಹಕ್ಕಿಗಾಗಿ ತಮ್ಮ ರಕ್ಷಣೆಗಾಗಿ ಯಾವ ಮನೆಯಲ್ಲಿ ಹೋಗಬೇಕು? ಯಾರ ಮುಂದೆ ಹೋಗಬೇಕು? ಅದಕ್ಕಾಗಿ ದಯವಿಟ್ಟು ತಾವು ತಕ್ಷಣ ಅವರಿಗೆ ಆದೇಶ ನೀಡಿರಿ. ಅವರನ್ನು ಸಸ್ಪೆಂಡ್ ಮಾಡಿಸಬೇಕು. ಮತ್ತು ಮುಂದೆ ಎನ್‌ಕ್ವೈರಿ ಆದಮೇಲೆ ಮುಂದಿನ ಕ್ರಮ ಸರ್ಕಾರ ಏನು ತೆಗೆದುಕೊಳ್ಳುತ್ತದೆಯೋ ತೆಗೆದುಕೊಳ್ಳಲಿ. ದಯವಿಟ್ಟು ತಾವು ಇದರ ಬಗ್ಗೆ ಹೇಳಬೇಕು. ತಾವು ಲಘುವಾಗಿ ತೆಗೆದುಕೊಂಡರೆ....

ಉಪಾಧ್ಯಕ್ಷರು :- ಲಘುವಾಗಿ ನಾನು ತೆಗೆದುಕೊಂಡಿಲ್ಲ. ಲಘುವಾಗಿ ಯಾರು ತೆಗೆದುಕೊಂಡಿದ್ದಾರೆ?

(ಗೊಂದಲ)

ಶ್ರೀ ಜಯರಾಮ ಶೆಟ್ಟಿ :- ಮಾನ್ಯ ಸಭಾಧ್ಯಕ್ಷರೇ, ತಾವು ದಯಮಾಡಿ ಕೇಳಬೇಕು. ಏಕೆಂದರೆ ಅಧಿಕಾರಿಗಳು, ಶಾಸಕರು ನಾವು ಯಾವ ಮಟ್ಟಕ್ಕೆ ಹೋಗಿದ್ದೇವೆ ಎಂದರೆ ಹೇಳುವುದಕ್ಕಾಗುವುದಿಲ್ಲ ಅಷ್ಟು ಕೆಳಮಟ್ಟಕ್ಕೆ ಹೋಗಿದ್ದೇವೆ. ಇವತ್ತು ಏನಾಗಿದೆ? ಅಧಿಕಾರಿಗಳು ರಾಜಕಾರಣಿಗಳು ಒಟ್ಟಾಗಿರುವುದರಿಂದ ಇವತ್ತು ನಮಗಿರುವಂಥ ಮಾನಸಿಕ ವೇದನೆಯಲ್ಲಿ ಏನು ಕೆಲಸ ನಾವು ಮಾಡುವುದಕ್ಕಾಗುತ್ತದೆ? ಯಾವುದೇ ಒಂದು ರಕ್ಷಣೆಗೆ ಹೋದರೆ ನಮ್ಮ ಮೇಲೇ ಸುಳ್ಳು ಕೇಸ್ ಹಾಕಿಕೊಂಡು ನಮ್ಮನ್ನೇ ಒಂದು ಆಪಾದಿತರು ಅಂತ ಮಾಡುತ್ತಿದ್ದಾರೆ ಇಲ್ಲಿ ಸದನದಲ್ಲಿ ತಾವು ನಮಗೆ ಅಷ್ಯೂರೆನ್ಸ್ ಕೊಡುತ್ತೀರಿ, ಉಪವಿಭಾಗಾಧಿಕಾರಿಯಿಂದ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳುತ್ತೀರಿ. ಆದರ ಮಧ್ಯದಲ್ಲಿ ಕೇಸ್ ಬುಕ್‌ಮಾಡುತ್ತಾರೆ. ಇವತ್ತು ನಾವು ಒಬ್ಬ ಶಾಸಕರಾಗಿ ನೈತಿಕವಾಗಿ, ಪ್ರಾಮಾಣಿಕವಾಗಿ ಜನಪರವಾಗಿ ಕೆಲಸ ಮಾಡುವಂಥ ಶಕ್ತಿ ಇಲ್ಲ. ದಯಮಾಡಿ, ಯಾರು ಇವತ್ತು ನಮಗೆ ರಕ್ಷಣೆ ಕೊಡುತ್ತಾರೆ ಹೇಳಿ. ಇವತ್ತು ನಾವು ಪ್ರಮಾಣಿಕವಾಗಿ ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವಂಥದ್ದಿದೆಯಾ? ತಾವೇ ಇದೇ ಸದನದಲ್ಲಿ ಹೇಳಿದ್ದಿರಿ, ಉಪವಿಭಾಗಾಧಿಕಾರಿಯಿಂದ ತನಿಖೆ ಮಾಡಿಸುತ್ತೇನೆ ಎಂದು. ಈ ಸದನಕ್ಕೆ ಏನು ಗೌರವ ಇದೆ? ಇವತ್ತು ನನ್ನ ಮೇಲೆ ನಾನ್ ಬೇಲಬಲ್ ವಾರೆಂಟ್ ಬಂದಿದೆ. ಇದಕ್ಕೆ ಉತ್ತರ ಕೊಡುವವರು ಯಾರು? ಇವತ್ತು ಅಧಿಕಾರಿಗಳೇ ಎಲ್ಲಾ ನಡೆಸುವಂತಾದರೆ ಇವತ್ತು ನಾವು ರಾಜಕಾರಣಿಗಳು, ಜನಪ್ರತಿನಿಧಿಗಳು ಏನು ಮಾಡಬೇಕು? ತಾವು ಸರಿಯಾಗಿ ಆಲೋಚನೆ ಮಾಡಿ. ಇದು ನನ್ನೊಬ್ಬನ ಪ್ರಶ್ನೆಯಲ್ಲ. ಇದು ಎಲ್ಲರ ಪ್ರಶ್ನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಆವತ್ತು ಸ್ವಲ್ಪ ತಾಳ್ಮೆಯಿಂದ ನಾವು ಕುಳಿತೆವು. ಜಯರಾಮಶೆಟ್ಟರಿಗೆ ಮತ್ತು ಯು. ಆರ್. ಸಭಾಪತಿಗಳಿಗೆ ಆದಂಥ ಅವಮಾನ ನಿಜವಾಗಿ ತಲೆ ತಗ್ಗಿಸುವಂಥ ಸಂಗತಿ. ಅವರ ಮೇಲೆ ಸುಳ್ಳು ಕೇಸ್ ಆಯಿತು. ನಾನ್ ಬೇಲಬಲ್ ವಾರೆಂಟ್ ಆಯಿತು. ಹೌಸ್‌ನಲ್ಲಿ ಅಶ್ಯೂರೆನ್ಸ್ ಕೊಟ್ಟಿದ್ದರು. ಸರ್ಕಾರದ ಗಮನಕ್ಕೆ ತಂದಿದ್ದೆವು. ಆದರೆ ಇವತ್ತು ಅದೇ ಯಾವ ಸಬ್-ಇನ್‌ಸ್ಪೆಕ್ಟರ್ ಇವರಿಗೆ ಅನ್ಯಾಯ ಮಾಡಿದ್ದನೋ ವರ್ಗಾವಣೆ ಮಾಡಿ ಅವನನ್ನು ಸಸ್ಪೆಂಡ್ ಮಾಡುವುದು ಬೇಡ, ಡಿಸ್‌ಮಿಸ್ ಮಾಡುವುದು ಬೇಡ; ಮತ್ತೆ ಅಲ್ಲೇ ಹಾಕಿಸೇಡು ತೀರಿಸಿಕೊಳ್ಳುವ ಕೆಲಸ ಆಯಿತು. ಹೀಗಾದರೆ ನಾವು ಹೇಗೆ ಸ್ವಾಮಿ ಇಲ್ಲಿ ಕೆಲಸ ಮಾಡುವುದು? ಬಸವರಾಜ್‌ದು ಏನಾಯಿತು? ಒಬ್ಬ ಇ. ಒ..... ನಾನು ಹೇಳುವುದು ಸಾರ್, ನಾವು ತಪ್ಪು ಮಾಡುವುದಿಲ್ಲ ಅಂತ ಹೇಳುವುದಿಲ್ಲ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಾನೂನಿಗೆ, ಶಾಸನಕ್ಕೆ ನಾವು ತಲೆಬಾಗಬೇಕಾಗುತ್ತದೆ. ಕಾನೂನಿನಂತೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಇಲ್ಲ ಅಂತ

ಹೇಳುವುದಿಲ್ಲ. ಆದರೆ ಅಧಿಕಾರಿಗಳ ಈ ಉದ್ಧಟತನದ ವರ್ತನೆ. ಇಲ್ಲಿ ಬಂದರೆ ಒಬ್ಬ ಚೀಫ್ ಸೆಕ್ರೆಟರಿ ಉನ್ನತ ಸ್ಥಾನದಲ್ಲಿರುವ ಅಧಿಕಾರಿ ಯಾವ ರೀತಿ ನಡೆದುಕೊಳ್ಳುತ್ತಾರೆ, ಅಲ್ಲಿರುವಂಥ ಒಬ್ಬ ಯಕಶ್ಚಿತ್ ಅಧಿಕಾರಿ ಈ ರೀತಿ ನಡೆದುಕೊಳ್ಳುವುದಕ್ಕೆ ಶುರಿಮಾಡಿದರೆ, ಒಬ್ಬರು ಇಬ್ಬರು ಇಂಥ ಅಧಿಕಾರಿ ನಡೆದುಕೊಳ್ಳುವುದರಿಂದ ಇಡೀ ಅಧಿಕಾರಿವರ್ಗಕ್ಕೆ ಅಪಮಾನ ಮಾಡುವಂಥ ಕೆಲಸತಾನೇ ಇದು? ಇಂಥ ವಿಷಯದ ಬಗ್ಗೆ ಇಲ್ಲಿ ಚರ್ಚೆಯಾಗುವಾಗ ಚೀಫ್ ಸೆಕ್ರೆಟರಿ ಮಾತನಾಡಬೇಕಾಗಿತ್ತು. ಸತ್ಯಾಸತ್ಯತೆಗಳನ್ನು ಪರಿಶೀಲನೆ ಮಾಡಬೇಕಾಗಿತ್ತು. ಸತ್ಯ ಅಂತ ಕಂಡರೆ ಸಸ್ಪೆಂಡ್ ಮಾಡಿದ್ದೇನೆ ಅಂತ ಗೌರ್ನಮೆಂಟ್‌ಗೆ ಹೇಳಬೇಕಾಗಿತ್ತು. ಆ ರೀತಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ನಾವು ಈ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ ಸ್ವಾಮಿ. ಒಂದು, ಎರಡು ಅಲ್ಲ. ನಮ್ಮನ್ನು ಈ ರೀತಿ ಅಧಿಕಾರಿಗಳು ಉಪಯೋಗ ಮಾಡಿಕೊಂಡು ಪೋಲೀಸ್ ಸ್ಟೇಷನ್ ಉಪಯೋಗ ಮಾಡಿಕೊಂಡು ಪ್ರತಿಪಕ್ಷವನ್ನು ಹತ್ತಿಕ್ಕುವುದೇ ಸರ್ಕಾರದ ಒಂದು ನಡವಳಿಕೆಯಾದರೆ ಈ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಡಿ. ಬಸವರಾಜ್ :– ಅಲ್ಲಿ ಆಗಿದ್ದು ಹೇಳಬೇಕಾಗಿದೆ ಅಲ್ಲವೇ? ಈಗ ಅವಮಾನಕ್ಕೆ ಒಳಗಾಗಿರುವವನು ನಾನು. ನೋವು ಪಡುತ್ತಿರುವವನು ನಾನು. ನನಗೆ ಒಂದೇ ಒಂದು ನಿಮಿಷ ಕೊಟ್ಟರೂ ಈ ಸದನದಲ್ಲಿ ನಾನು ಹೇಳುತ್ತೇನೆ. ನನ್ನ ನೋವನ್ನು ನಾನು ಸದನದಲ್ಲಿ ಹೇಳಬೇಕಲ್ಲ. ಇನ್ನು ಎಲ್ಲಿ ಹೋಗಿ ಹೇಳಬೇಕು? ಯಾರ ಹತ್ತಿರ ಹೋಗಿ ಹೇಳಬೇಕು. ಒಬ್ಬ ಅಧಿಕಾರಿ ಕಾರ್ಯನಿರ್ವಾಹಕ ಅಧಿಕಾರಿ ನನ್ನ ಮುಖ ನೋಡುವುದಿಲ್ಲ. ನನ್ನ ಕಛೇರಿಗೆ ಬರುವುದಿಲ್ಲ ಅಂದರೆ ಇನ್ನೊಬ್ಬ ಅಧಿಕಾರಿಯೂ ಅದೇ ರೀತಿ ಹೇಳುತ್ತಾನೆ. ಇವತ್ತು ಶಾಸಕರು ಕರೆದರೆ ಆ ಅಧಿಕಾರಿ ನಾನು ಬೆಲೆ ಕೊಡುಲಿಲ್ಲ, ನಾನು ಏತಕ್ಕೆ ಬೆಲೆ ಕೊಡಬೇಕು, ನಾನೂ ಬರುವುದಿಲ್ಲ, ನನಗೇನು ಕಾಯಿದೆ ಇದೆಯೇ ಎಂದು ಹೇಳುತ್ತಾನೆ. ಅಂಥದ್ದರಲ್ಲಿ ನಾನು ಕ್ಷೇತ್ರಕ್ಕೆ ಹೋಗಿ ಏನು ಕೆಲಸ ಮಾಡುವುದಕ್ಕಾಗುತ್ತದೆ? ಯಾವ ಮುಖ ಇಟ್ಟುಕೊಂಡು ನಾನು ಮತದಾರರ ಮನೆಯ ಬಾಗಿಲಿಗೆ ಹೋಗಲಿ ಸ್ವಾಮಿ? ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಇವತ್ತು ಉದ್ಧಟತನ ಎನ್ನುವುದು ಎಲ್ಲೆ ಮೀರಿ ನಡೆಯುತ್ತಿದೆ. ಇವತ್ತು ನೀವು ಅವರನ್ನು ಯಾವ ತರಹ ನಿಯಂತ್ರಣ ಮಾಡುತ್ತೀರಿ? ಅದರ ಬಗ್ಗೆ ನಮಗೆ ಸಮಾಧಾನಕರವಾದ ಹೇಳಿಕೆ ನೀಡಬೇಕಾಗಿದೆ. ಇವತ್ತು ನೀವು ಹೇಳಿಕೆಯನ್ನು ನೀಡಲಿಲ್ಲ ಅಂದರೆ ನಾವು ಕ್ಷೇತ್ರದಲ್ಲಿ ಹೇಗೆ ಹೋಗುವುದಕ್ಕೆ ಸಾಧ್ಯ ಇದೆ? ಇವತ್ತು ಒಬ್ಬ ಅಧಿಕಾರಿ ನನ್ನನ್ನು ನೋಡುವುದಕ್ಕೆ ಬರುವುದಿಲ್ಲ ಎಂದು ಅಂದರೆ 20 ಅಂಶಗಳ ಕಾರ್ಯಕ್ರಮವನ್ನು ನಾನು ಯಾವ ತರಹ ಮಾಡಬೇಕು? ಆ 20 ಅಂಶದ ಕಾರ್ಯಕ್ರಮಕ್ಕೆ ಆ ಅಧಿಕಾರಿ ಕಾರ್ಯದರ್ಶಿಯಾಗಿದ್ದಾರೆ. ಕಾರ್ಯದರ್ಶಿಯಾಗಿದ್ದು ಆ ಒಂದು ಪದವಿಯ ಮಹತ್ವವನ್ನು ತಿಳಿದುಕೊಂಡಾದರೂ 20 ಅಂಶದ ಕಾರ್ಯಕ್ರಮದ ಕೆಲಸ ಮಾಡಬೇಕು ಎನ್ನುವಂಥ ಒಂದು ಸೌಜನ್ಯತೆ ಅವರಿಗೆ ಬರಲಿಲ್ಲ. ಎರಡನೇಯ ತಾರೀಖು ನಾನು ಕಂಪ್ಲೇಂಟ್ ಕೊಟ್ಟಿದ್ದೇನೆ. ಇವತ್ತು 31 ನೇ ತಾರೀಖು ಆಗಿದೆ. ಯಾವುದೇ ಒಂದು ಕ್ರಮ ಕೈಗೊಂಡಿಲ್ಲ. ಈ ತರಹ ಆಯಿತು ಅಂದರೆ ನಾವು ಹೇಗೆ ಕೆಲಸ

ನಿರ್ವಹಿಸುವುದು ಸ್ವಾಮಿ? ಈ ಉದ್ಘಟತನದ ಬಗ್ಗೆ ತಾವು ಸೂಕ್ತವಾದ ಕ್ರಮ ಕೈಗೊಂಡು ಉದ್ಘಟತನ ಆಧಿಕಾರಿಗೆ ಶಿಕ್ಷೆ ವಿಧಿಸಬೇಕು. ಇಲ್ಲದಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ, ಶಾಸಕರಿಗೆ ಬೆಲೆ ಇರುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಿ ಉದ್ಘಟತನದಲ್ಲಿ ವರ್ತಿಸುವ ಆಧಿಕಾರಿಗಳ ಬಗ್ಗೆ ನಾನು ಧರಣಿ ಕೂಡುತ್ತಿದ್ದೆ ಸ್ವಾಮಿ.

5-(X) ಪಿ.ಎಂ.

ಉಪಾಧ್ಯಕ್ಷರು :– ಈಗ ಮಾನ್ಯ ಸಿಂಧ್ಯಾರವರು ಮಾತನಾಡುತ್ತಾರೆ.

ಶ್ರೀ ಎಸ್. ಆರ್. ಕಾಶಪ್ಪನವರ್ :– ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಎರಡು ಕಡೆ ನನ್ನ ಮೇಲೆ ನಡೆದಿರತ್ಕಕ ಹಲ್ಲೆಗಳು ಆದಕ್ಕೆ ಸಂಬಂಧಪಟ್ಟಹಾಗೆ ಹಸ್ತಕ್ಷೇಪ ಮಾಡಿರತಕ್ಕ ಆಧಿಕಾರಿಗಳ ವಿಷಯವಾಗಿ ಸರ್ಕಾರಕ್ಕೆ ಸಾಕಷ್ಟು ಸಲ ಪತ್ರ ಬರೆದಿದ್ದೇನೆ. ಅಷ್ಟೇ ಅಲ್ಲ ಆ ಆಧಿಕಾರಿಗಳು ಬೇರೆ ಕಡೆ ಇದ್ದವರನ್ನು ಉದ್ದೇಶ ಪೂರ್ವಕವಾಗಿಯೇ ಸರ್ಕಾರ ನನ್ನ ಮತಕ್ಷೇತ್ರದಲ್ಲಿ ಹಾಕಿದೆ. ಈ ವಿಷಯ ಮಾನ್ಯ ಸಿಂಧ್ಯಾ ಸಾಹೇಬರಿಗೆ ಸಾಕಷ್ಟು ಗೊತ್ತು. ಮುಖ್ಯಮಂತ್ರಿಯವರು ಜವಾಬ್ದಾರಿ ಸ್ಥಾನದಲ್ಲಿ ಕುಳಿತುಕೊಂಡವರು ಇಂತಹ ಕೆಲಸಗಳನ್ನು ಮಾಡಿದ್ದಾರೆ. ಇವರು ಇಂತಹ ಕೆಲಸಗಳನ್ನು ಮಾಡುವುದರಿಂದ ಪ್ರಜಾಪ್ರಭುತ್ವದಲ್ಲಿ ಇವತ್ತಿನ ದಿವಸ ವಿರೋಧಿ ಪಕ್ಷದ ಸದಸ್ಯರಾದ ನಾವು ಯಾವರೀತಿ ನಮ್ಮ ನಮ್ಮ ಮತಕ್ಷೇತ್ರಗಳಲ್ಲಿ ಕೆಲಸ ಮಾಡಬೇಕೆಂಬುದು ತಿಳಿಯದಾಗಿದೆ. ಇವತ್ತಿನ ದಿವಸ ನಾವು ಯಾವುದೇ ಒಂದು ಕೆಲಸ ಮಾಡಬೇಕಾದರೂ ಕೂಡ ಆಧಿಕಾರಿಗಳ ಸಹಕಾರ ಬಹಳಷ್ಟು ಮುಖ್ಯವಾಗಿ ಬೇಕಾಗುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ನಾವು ಕೆಲಸ ಮಾಡುವಂತಹ ಡೆವಲಪ್‌ಮೆಂಟ್ ವರ್ಕ್ಸ್‌ಗಳಿಗೆ ಸಾಕಷ್ಟು ಆಧಿಕಾರಿಗಳು ಇವತ್ತಿನ ವಿರೋಧ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಆ ಕೆಲಸವನ್ನು ಶಾಸಕರು ಹೇಳಿದರೂ ಕೂಡ ಮಾಡುವುದಿಲ್ಲ. ಜನರು ಹೇಳಿದರೂ ಕೂಡ ಮಾಡುವುದಿಲ್ಲ ಈ ಶಾಸಕರು ಏನು ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿಯೆಂದು ಹೇಳುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಇದು ಮುನ್ನೂಲ್ಕು ಜನ ಶಾಸಕರುಗಳಿಗೆ ಸಂಬಂಧಪಟ್ಟ ವಿಷಯ. ಬಹಳ ಜನ ಸದಸ್ಯರದು ಇದೇ ರೀತಿ ಇದೆ ಇದು ಒಬ್ಬರದಲ್ಲ. ಸದಸ್ಯರ ಹಕ್ಕು ಚಲಾವಣೆ ಮಾಡಲಿಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು :– ತಾವು ದಯಮಾಡಿ ಕುಳಿತುಕೊಳ್ಳಿ. ತಮಗೆ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಸಿಂಧ್ಯಾರವರು ಮಾತನಾಡಲಿ ಆಮೇಲೆ ಉಪ ಮುಖ್ಯ ಮಂತ್ರಿಯವರು ಮಾತನಾಡುತ್ತಾರೆ.

ಶ್ರೀ ಎಸ್. ಆರ್. ಕಾಶಪ್ಪನವರ್ :– ಹಿಂದೆ ಕೂಡ ನಾನು ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇದು ಕೂಡ ಅಂತಹ ಘಟನೆ. ಇವತ್ತಿಗೂ ಕೂಡ ಮಾನ್ಯ ಸಚಿವರು ಪೋಸ್ಟ್ ಮಾಡಲಿಕ್ಕೆ ಹೇಳುತ್ತಿದ್ದಾರೆ. ಎಷ್ಟೋ ಜನ ಕ್ಯಾಬಿನೆಟ್ ಸಚಿವರುಗಳು ಅಂತಹ ಪತ್ರಗಳನ್ನು ಸರ್ಕಾರಕ್ಕೆ ಬರೆದರೂ ಕೂಡ

ಹೇಳುತ್ತಾರೆ, 10 ಜನ ಕ್ಯಾಬಿನೆಟ್ ಸಚಿವರು ಹೇಳಿತ್ತಾರೆ. ಅವನನ್ನೆ ನಾವು ಅಲ್ಲಿಗೆ ಪೋಸ್ಟ್ ಮಾಡುತ್ತೇವೆಂದು. ಏನು ಶಾಸಕರ ಜೀವಹರಣ ಮಾಡುವ ಉದ್ದೇಶ ಈ ಸರ್ಕಾರಕ್ಕೆ ಇದೆಯೇ? ಇದು ಸಾಮಾನ್ಯವಾದ ಪ್ರಶ್ನೆಯಲ್ಲ. ಇದು ಗಂಭೀರವಾದಂತಹ ವಿಚಾರ. ಪ್ರತಿಯೊಂದು ಶಾಸಕರ ಕ್ಷೇತ್ರದಲ್ಲಿಯೂ ಮಂತ್ರಿಗಳ ಕೈವಾಡ ಆಗತಕ್ಕದ್ದನ್ನು ಬಿಡಬೇಕು.

ಉಪಾಧ್ಯಕ್ಷರು :- ಆಯಿತು, ಮಾನ್ಯ ಸಿಂಧ್ಯಾರವರೇ ಮಾತನಾಡಿ. ಅವರು ಸರ್ಕಾರದ ಪರವಾಗಿ ಮಾತನಾಡುತ್ತಾರೆ. ಮಾನ್ಯ ಸದಸ್ಯರೆಲ್ಲ ದಯಮಾಡಿ ಕೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಹಿರಿಯ ಬಹಳ ಅನುಭವಸ್ಥ ಆಡಳಿತ ನಡೆಸಿರತಕ್ಕ ಶಾಸಕರು ಇಲ್ಲಿದ್ದಾರೆ. ಜೊತೆಗೆ ಆಡಳಿತ ನಡೆಸದಿರತಕ್ಕ ವಿರೋಧಪಕ್ಷಗಳಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಿರತಕ್ಕ ಶಾಸಕರು ಸಹಿತ ಇದ್ದಾರೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳಿಗೆ ಗೌರವವನ್ನು ಕೊಡತಕ್ಕದ್ದು ಬರೀ ಸರ್ಕಾರಿ ಅಧಿಕಾರಿಗಳು ಅಥವಾ ನೌಕರರ ಕರ್ತವ್ಯ ಅಷ್ಟೇ ಅಲ್ಲ, ನಾವು ಸಹಿತ ಮಂತ್ರಿಗಳಾಗಿರತಕ್ಕವರು ಯಾವುದೇ ಗೌರವಾನ್ವಿತ ಶಾಸಕರು ಒಂದು ಪತ್ರಕೊಟ್ಟಾಗ ಅಥವಾ ನಮ್ಮ ಕಛೇರಿಗೆ ಬಂದಾಗ ನಾವು ಎದ್ದು ನಿಂತುಕೊಂಡು ಅವರನ್ನು ಸ್ವಾಗತ ಮಾಡಿ ಅವರನ್ನು ಕೂರಿಸಿ, ಅವರ ಕಷ್ಟಸುಖವನ್ನು ವಿಚಾರಿಸಿಕೊಂಡು ಹೋಗತಕ್ಕ ಒಂದು ಸಂಪ್ರದಾಯ ನಮ್ಮಲ್ಲಿ ಬೆಳೆದು ಕೊಂಡು ಬಂದಿದೆ. ಮಾನ್ಯ ಸದಸ್ಯರಾದ ಮಂಜುನಾಥ್ ಕುನ್ನೂರು ಅವರು ತಮ್ಮ ಭಾಷಣದಲ್ಲಿ ಹೇಳಿರತಕ್ಕ ವಿಚಾರ ಏನಿದೆ ಇದು ನಿಜಕ್ಕೂ ಸಹ ಒಂದು ಆತಂಕಕಾರಿಯಾಗಿರತಕ್ಕ ವಿಚಾರ. ಜನತಂತ್ರ ವ್ಯವಸ್ಥೆಯಲ್ಲಿ ಇಂತಹ ಬೆಳವಣಿಗೆಯ ಬಗ್ಗೆ ಅವಕಾಶವನ್ನು ಕೊಡುವುದರಿಂದ ಜನತಂತ್ರ ವ್ಯವಸ್ಥೆ ಉಳಿಯಲಿಕ್ಕೆ ಸಾಧ್ಯವಿಲ್ಲವೆನ್ನತಕ್ಕದ್ದು ನಮ್ಮ ಪಕ್ಷದ ನಮ್ಮೆಲ್ಲರ ಸ್ಪಷ್ಟವಾದ ವಿಚಾರ. ಇದೇ ಸಂದರ್ಭದಲ್ಲಿ ಮಾತುಕತೆಯನ್ನು ಆಡತಕ್ಕ ಸಂದರ್ಭದಲ್ಲಿ ನಮ್ಮ ಜಯರಾಮ್ ಶೆಟ್ಟಿಯವರು ಇರಬಹುದು ನಮ್ಮ ಬಸವ ರಾಜ್‌ರವರು ಇರಬಹುದು ಇವರಿಗೆ ಅಲ್ಲಿರತಕ್ಕ ಸರ್ಕಾರಿ ನೌಕರರು ಅಪಮಾನವನ್ನು, ಅಥವಾ ಈ ಕಡೆ ಕುಳಿತಿರತಕ್ಕ ನನ್ನ ಮಿತ್ರರಿಗೆ ಅಪಮಾನ ಮಾಡಿದ್ದರೆ ಅದು ಅಷ್ಟೆ. ಅಥವಾ ಕಾಶಪ್ಪನವರಿಗೆ ಕಾನೂನು ಬಾಹಿರವಾಗಿ ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆಯಾಗಲೇಬೇಕು ಎನ್ನುವುದನ್ನು ನಾವು ಒಪ್ಪುತ್ತೇವೆ ಅದರ ಬಗ್ಗೆ ಬಿನ್ನಾಭಿಪ್ರಾಯ ಇಲ್ಲ. ನಾವು ಇಲ್ಲಿ ಅಧಿಕಾರದಲ್ಲಿ ಕುಳಿತುಕೊಂಡಿದ್ದೇವೆ, ಜನರು ನಮಗೆ ಓಟು ಕೊಟ್ಟಿದ್ದಾರೆ ನಾವು ಶಾಶ್ವತವಾಗಿ ಸಾಯುವವರೆಗೂ ಇಲ್ಲಿ ಗೂಟ ಹೊಡೆದುಕೊಂಡು ಕುಳಿತುಕೊಳ್ಳುತ್ತೇವೆ ಎಂದು ಹೇಳಿ ನಾವೇನು ಅಂದುಕೊಂಡಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಏನು ಬೇಕಾದರೂ ಆಗಬಹುದು. ನಾವು ಆ ಕಡೆ ಹೋಗುತ್ತೇವೆ ಅನ್ನುವುದು ನಮಗೆ ಗೊತ್ತಿದೆ. ಹಿಂದೆ ಇಲ್ಲಿದ್ದು ಆ ಕಡೆಗೆ ಹೋಗಿದ್ದೇವೆ. ಎಲ್ಲರಿಗೂ ಸಹಿತ ಸ್ವಾಭಾವಿಕವಾಗಿ ಅಲ್ಲಿಗೆ ಹೋಗುತ್ತೇವೆನ್ನುವ ಪ್ರಜ್ಞೆ ನಮಗೆ ಇದೆ.

ಆದರಿಂದ ನಾವು ಕಾನೂನು ಮಾಡುವಾಗ ಆದನ್ನು ಕಾರ್ಯಾಚರಣೆ ಮಾಡುವಾಗ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆನ್ನುವುದು ನಮಗೆ ಗೊತ್ತಿದೆ. ಆಡಳಿತ ಯಂತ್ರದಲ್ಲಿ ಒಳ್ಳೆಯವರು ಇದ್ದಾರೆ, ಬಹಳ ಉತ್ತಮವಾಗಿರತಕ್ಕ ಅಧಿಕಾರಿಗಳು ಇದ್ದಾರೆ. ಉತ್ತಮವಾಗಿ ಪ್ರಾಮಾಣಿಕವಾಗಿರತಕ್ಕ ನೌಕರರು ಇವತ್ತಿನವರೆಗೂ ಸಹ ಇದ್ದಾರೆ. ದುಷ್ಟರು ನಮ್ಮ ಸಮಾಜದಲ್ಲಿ ಯಾವರೀತಿ ಇದ್ದಾರೆ ಆದೇರೀತಿ ಅಲ್ಲಿಯು ಇದ್ದಾರೆ. ಅದು ಯಾರಿಗೇ ಆಗೌರವ ಆಗಿರಲಿ ಅದು ನಮಗೆ ಆಗೌರವ ಆದಹಾಗೆ. ಆದರಲ್ಲೂ ಶಾಸಕರ ಭವನದಲ್ಲಿ ನೀನು ಹೇಗೆ ಇರುತ್ತಿಯೋ ನಿನಗೆ ಒಂದು ಕೈ ನೋಡಿ ಕೊಳ್ಳುತ್ತೇನೆಂದು ಹೇಳುವುದಾದಲ್ಲಿ ಅದು ತಾವು ಕುಳಿತಿರತಕ್ಕ ಪೀಠಕ್ಕೆ ಅಧ್ಯಕ್ಷಸ್ಥಾನಕ್ಕೆ ಮಾಡಿರತಕ್ಕ ಅವಮಾನ ಆದು. ಅದನ್ನು ನಮ್ಮ ಸರ್ಕಾರ ಮನಗಂಡಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅತ್ಯಂತ ವಿನಯದಿಂದ ನಮ್ಮೆಲ್ಲ ಶಾಸಕ ಮಿತ್ರರಲ್ಲಿ ವಿರೋಧಿ ಧುರೀಣರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಇದು ಆಗಬಾರದು. ತಮ್ಮ ಮನಸ್ಸಿಗೆ ಏನು ನೋವಾಗಿದೆ ಇಂತಹ ಘಟನೆಗಳು ಆಗುತ್ತಿವೆ ಇದರ ಬಗ್ಗೆ ಎಚ್ಚರಿಕೆಯನ್ನು ಸರ್ಕಾರ ಕೊಡುತ್ತದೆ. ಆದರೆ ಮಾನ್ಯ ಮಂಜುನಾಥ್ ಕುನ್ನೂರುರವರು ಏನು ಹೇಳಿದ್ದಾರೆ ಜಿಲ್ಲಾ ಮಂತ್ರಿಗಳ ಒಂದು ಹೇಳಿಕೆಯನ್ನು ಹೇಳಿದ್ದಾರೆ. ಇದು ನನ್ನ ಗಮನಕ್ಕೆ ಬಂದಿದೆ ನಾನು ಕ್ರಮ ತೆಗೆದು ಕೊಳ್ಳುತ್ತೇನೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ತತ್‌ಕ್ಷಣದಲ್ಲಿ ಈ ರಾಜ್ಯದ ಇತಿಹಾಸದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳಷ್ಟು ವರ್ಷಗಳ ಕಾಲ ಮಂತ್ರಿಗಳಾಗಿದ್ದವರು, ದಯಮಾಡಿ ಅವರು ನನಗೆ ಮನವರಿಕೆಯನ್ನು ಮಾಡಿಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮಂಜುನಾಥ್ ಕುನ್ನೂರು ಅವರು ಹೇಳಿದ್ದು ಸುಳ್ಳು ಎಂದು ನಾನು ಹೇಳುವುದಿಲ್ಲ. ಅದು ಸತ್ಯವೆಂದು ನಾನು ನಂಬಕೊಂಡಿದ್ದೇನೆ. ಆದರೆ ಸರ್ಕಾರ ಎನ್ನತಕ್ಕದ್ದು ಒಂದು ವ್ಯವಸ್ಥೆ. ಈ ವ್ಯವಸ್ಥೆಗೆ ಮೇಲ್ನೋಟಕ್ಕಾದರೂ ನಮಗೆ ಅವರು ಏನು ಹೇಳಿದ್ದಾರೆ ಅದು ಕಂಡುಬರಬೇಕಾಗುತ್ತದೆ. ಹಾಗಾದರೆ ಶಾಸಕರು ಹೇಳಿದ್ದು ಸುಳ್ಳಾ ಎಂದು ನೀವು ಕೇಳಬಹುದು. ನಾನು ಅದು ಸುಳ್ಳು ಎಂದು ಹೇಳುತ್ತಿಲ್ಲ. ಅವರು ಹೇಳುವುದರಲ್ಲಿ ಸತ್ಯವಿರಬಹುದು. ಆದರೆ ತಕ್ಷಣದಲ್ಲಿ ಸದನದಲ್ಲಿ ಸಸ್ಪೆಂಡ್ ಮಾಡುತ್ತೇನೆಂದು ಹೇಳುವ ಬದಲು ಇವತ್ತು ಹೋಗಿ ಅಲ್ಲಿ ವಿಚಾರಣೆ ಮಾಡಿ ಇವತ್ತು ರಾತ್ರಿಯವರಿಗೆ ಸಮಯವಿದೆ, ಮತ್ತೆ ನಾಳೆ ಬೆಳಿಗ್ಗೆ 11 ಗಂಟೆಗೆ ಇಲ್ಲಿ ನಾವು ಬರುತ್ತೇವೆ. ಇಲ್ಲಿ ನಾವು ಮತ್ತೆ ಸೇರಬೇಕಾಗಿದೆ. ಚರ್ಚೆ ಮಾಡಬೇಕಾಗಿದೆ, ವಿಧಾನಸಭೆ ಅಧಿವೇಶನ ಇರುವುದೇ ಆ ಕಾರಣದಿಂದ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದು, ಇದು ಒಂದೇ ಪ್ರಕರಣ ಅಲ್ಲ ಮಾನ್ಯ ಗೌರವಾನ್ವಿತ ಶಾಸಕರುಗಳು ಇಲ್ಲಿ ಏನೇನು ಪ್ರಕರಣಗಳನ್ನು ಪ್ರಸ್ತಾಪ ಮಾಡಿದ್ದಾರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಖಂಡಿತವಾಗಿಯೂ ನಾವು ಕೊಡುತ್ತೇವೆ. ಆ ಭರವಸೆಯನ್ನು ಕೊಡುತ್ತೇವೆ. ಸರ್ಕಾರದ ಪರವಾಗಿ ನಾನು ಅತ್ಯಂತ ಕಳಕಳಿಯ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ನಾಳೆ ಮತ್ತೆ ಇದೇ ಬೇಡಿಕೆಗಳ ಬಗ್ಗೆ ಚರ್ಚೆಯನ್ನು

ಮುಂದುವರಿಸಬೇಕಾಗುತ್ತದೆ. ನಾವು ಕ್ರಮ ತೆಗೆದುಕೊಳ್ಳದೇ ಹೋದರೆ ಮತ್ತೆ ಧರಣಿ ಮಾಡಲಿಕ್ಕೆ ಅವಕಾಶ ಸ್ವಾತಂತ್ರ್ಯ ಇದೆ. ಸರ್ಕಾರಕ್ಕೆ ಸಹಕಾರ ಕೊಡಬೇಕು. ಧರಣಿಯನ್ನು ಕೈಬಿಡಬೇಕೆಂದು ಅವರಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡಬೇಕು, ಅವರ ಗೌರವ ಕಾಪಾಡಬೇಕು ಎನ್ನುವ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಯಾವುದೇ ಸರ್ಕಾರಿ ನೌಕರರು ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದ್ದೇವೆ ಎನ್ನುವುದನ್ನು ಅರ್ಥಮಾಡಿಕೊಂಡು ಕೆಲಸ ಮಾಡ ಬೇಕಾಗುತ್ತದೆ ಹಾಗೆ ತಿಳಿದುಕೊಂಡು ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಟ್ಟು ಅವರು ಸಾರ್ವಜನಿಕ ಕೆಲಸಗಳನ್ನು ಹೇಳಿದಾಗ, ಗೌರವದಿಂದ ಮಾಡಿಕೊಡಬೇಕಾದದ್ದು ಅವರ ಆದ್ಯ ಕರ್ತವ್ಯ. ಈ ತರಹದ ಕರ್ತವ್ಯದಲ್ಲಿ ಲೋಪ ಆದಾಗ ಆಗ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಇದರಲ್ಲಿ ಹಿಂದೆ ಮುಂದ ಹೋಗತಕ್ಕ ಪ್ರಶ್ನೆಯೇ ಇಲ್ಲ. ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಕೂಡಲೇ ವಿಚಾರಣೆ ಮಾಡಿಸಿ ತಪ್ಪಿತಸ್ಥರು ಎಂದು ಕಂಡುಬಂದ ತಕ್ಷಣ ಅವರನ್ನು ರಕ್ಷಣೆ ಮಾಡತಕ್ಕ ಪ್ರಶ್ನೆ ಉದ್ಭವವಾಗಿರುವುದಿಲ್ಲ. ಅವರ ಮೇಲೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕೆಂದು ನಾನು ಕಳಕಳಿಯ ಮನವಿಯನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ಒಂದು ನಿಮಿಷ. ಇಡೀ ಸದನದಲ್ಲಿ ಒಕ್ಕೊರಲಿನಿಂದ ನಡೆದಿರತಕ್ಕ ಅನ್ಯಾಯವನ್ನು ಮಾನ್ಯ ಕುನ್ಹೂರು ರವರು ನೇರವಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಮಾತಿನಲ್ಲಿ ಸರ್ಕಾರಕ್ಕೆ ಇನ್ನೂ ಅದರ ಬಗ್ಗೆ ತನಿಖೆಯಾಗಬೇಕು ಎನ್ನುವ ಒಂದು ವಾದ ಇದ್ದಹಾಗೆ ಕಾಣುತ್ತದೆ. ನನಗನಿಸುತ್ತದೆ ಇನ್ನು ಜಾಸ್ತಿ ಬೇಕಾಗಿಲ್ಲ. ನಾನು ಒಂದೇ ಮಾತು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ. ಸದನದ ಸದಸ್ಯರಿಗೆ ಸಂಪೂರ್ಣ ರಕ್ಷಣೆಯನ್ನು ಕೊಡಬೇಕಾದ ಜವಾಬ್ದಾರಿ ತಮ್ಮದು. ಮತ್ತು ಸದನದಲ್ಲಿ ನಾವು ಯಾವುದೇ ವಿಚಾರವನ್ನು ಮುಕ್ತವಾಗಿ ಚರ್ಚೆ ಮಾಡಬೇಕಾದರೆ ನಮಗೆ ಭಯೋತ್ಪಾದನೆ ಇರಬಾರದು. ಇದೆಲ್ಲವೂ ಒಂದು ಕಾನೂನ ಪ್ರಕಾರ ಬಂದಿರತಕ್ಕ ವಿಶಿಷ್ಟವಾದ ಸವಲತ್ತುಗಳು ಮತ್ತು ಹಕ್ಕು ಇದು. ಈ ಹಕ್ಕಿಗೆ ಇವತ್ತು ಮೊಟಕು ಬಂದಿದೆ. ಇಲ್ಲಿ ನಮ್ಮ ಹಕ್ಕಿನ ಚ್ಯುತಿಯೂ ಆಗಿದೆ. ತಮ್ಮಲ್ಲಿ ಒಂದು ಸಲಹೆ ಮಾಡುತ್ತೇನೆ ಅವರನ್ನು ಅಮಾನತ್ತಿನಲ್ಲಿಡುವವರೆಗೆ ನಾವು ಧರಣಿ ಬಿಡುವುದಿಲ್ಲ. ತಾವು ಬೇಕಾದರೆ ಸದನವನ್ನು ಮುಂದಕ್ಕೆ ಹಾಕಿ. ನಾಳೆ ಬೇಕಾದರೆ ಸರ್ಕಾರ ಹೇಳಲಿ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಒಂದು ನಿಮಿಷ. ನೋಡಿ ಇಷ್ಟೆಲ್ಲ ಶಾಸಕರು ಎಲ್ಲಾ ವಿರೋಧ ಪಕ್ಷಗಳ ಮುಖಂಡರು ಒಬ್ಬ ಶಾಸಕರಿಗೆ ಆಗಿರತಕ್ಕ ತೊಂದರೆ ಮತ್ತು ಅವಮಾನವನ್ನು ಬೆದರಿಕೆಯನ್ನು ಸದನದಲ್ಲಿ ಹೇಳಿದರೂ

ಕೂಡ ಆದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಇಷ್ಟು ಜನ ಶಾಸಕರು ಹೇಳಿದಕ್ಕೂ ಸರ್ಕಾರ ಕಿಮ್ಮತ್ತು ಕೊಡುವುದಿಲ್ಲ ನಮ್ಮದೇ ಆದಂತಹ ದಾರಿಯಲ್ಲಿ ನಾವು ಹೋಗುತ್ತೇವೆಂದು ಹೇಳತಕ್ಕದ್ದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜಾ ಪ್ರತಿನಿಧಿಗಳಿಗೆ ಮಾಡತಕ್ಕ ಒಂದು ಅವಮಾನ. ಅದೊಂದು ರೀತಿ ಅಪಚಾರ. ಅವರನ್ನು ನೀವು ಸಸ್ಪೆಂಡ್ ಮಾಡುವವರೆಗೂ ಹೌಸನ್ನು ಅಡ್ಜರ್ನ್ಡ್ ಮಾಡಿ ಅವರನ್ನು ಸಸ್ಪೆಂಡ್ ಮಾಡಿದ ಮೇಲೆ ನಾವು ಸೇರೋಣ ಆಮೇಲೆ ಚರ್ಚೆ ಮಾಡೋಣ. ಆಕಾಶ ಏನೂ ಕಳಚಿ ಬೀಳುವುದಿಲ್ಲ. ಒಬ್ಬ ಅಧಿಕಾರಿಯನ್ನು ರಕ್ಷಣೆ ಮಾಡುವುದಕ್ಕೋಸ್ಕರ ಇಷ್ಟು ಜನ ಶಾಸಕರು ಹೇಳಿದರೂ ಕೂಡ ಕೇಳಲಿಲ್ಲ ಎಂದರೆ ಪ್ರತಿಭಟನೆ ಮಾಡಿ ನಾವು ಕೂಡ ಧರಣಿ ಮಾಡಬೇಕಾಗುತ್ತದೆ.

(ಮಾನ್ಯ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಬಂದು ನಿಂತುಕೊಂಡರು)

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೇ, ನಾವು ಸರ್ಕಾರದ ಮೇಲೆ ಆರೋಪ ಮಾಡುತ್ತಿಲ್ಲ. ಅಥವಾ ಪ್ರತಿಪಕ್ಷದಲ್ಲಿ ಇರುವಂಥ ಈ ಕಡೆಯವರಿಗೆ ನಮಗೆ ರಕ್ಷಣೆ ಮಾಡಿಕೊಳ್ಳುವಂಥ ಶಕ್ತಿ ಇಲ್ಲವೆಂದು ಆಂತಾನೂ ಅಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗದೇ ಇರುವಂಥ ಉಸಿರು ಕಟ್ಟುವಂಥ ಪರಿಸ್ಥಿತಿ ಉಂಟಾಗಿದೆ ನಾಲ್ಕಾರು ಘಟನೆಗಳು ನಡೆದಿವೆ. ಇವತ್ತು ನೂರಕ್ಕೆ ತೊಂಬತ್ತು ಜನ ಒಳ್ಳೆ ಅಧಿಕಾರಿಗಳು ಇದ್ದಾರೆ. ಒಬ್ಬಿಬ್ಬರು ಇಂತಹ ಉದ್ದಟತನದಿಂದ ವರ್ತನೆ ಮಾಡುವ ಅಧಿಕಾರಿಗಳಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿರುವಂಥ ಈ ಕಾಲದಲ್ಲಿ, ಇದು ಆಡಳಿತ ಪಕ್ಷ, ವಿರೋಧ ಪಕ್ಷದ ಪ್ರಶ್ನೆ ಅಲ್ಲ. ಅಥವಾ ಏನೂ ತಪ್ಪು ಮಾಡದೇ ಇರತಕ್ಕಂಥ ಯಾವುದೋ ಅಧಿಕಾರಿ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಉದ್ದೇಶವೂ ನಮ್ಮದಲ್ಲ. ಸ್ವಾಮಿ, ಏನಾಯಿತು? ಒಬ್ಬ ಗೌರವಾನ್ವಿತ ಸದಸ್ಯರು ಶ್ರೀ ಜಯರಾಮಶೆಟ್ಟಿರು ಕಣ್ಣೀರು ಹಾಕಿದರು. ಯಾರೋ ಒಬ್ಬ ಹೆಣ್ಣುಮಗಳಿಗೆ ಅನುಕೂಲ ಮಾಡುವುದಕ್ಕೆ ಹೋದರೆ ಆ ಅಧಿಕಾರಿ ಯಾವ ರೀತಿ ನಡೆದುಕೊಂಡ? ಇವತ್ತು ಅಲ್ಲಿ ನಮಗೆ ಆಶ್ವಾಸನೆ ಸಿಕ್ಕಿತು, ತನಿಖೆ ಮಾಡಿಸುತ್ತೇವೆ ಅಂತ ಹೇಳಿ. ನಾನ್‌ಬೇಲೇಬಲ್ ವಾರಂಟ್ ಆಯಿತು. ಅವತ್ತು ಯಾವ ಎಸ್.ಐ.ನ್ನು ವರ್ಗಾವಣೆ ಮಾಡಿದರೋ, ಇವತ್ತು ಅದೇ ಎಸ್.ಐ.ಯನ್ನು ಅಲ್ಲಿ ಹಾಕಿದರೆ ಅವನೇನು ತಿಳಿದುಕೊಳ್ಳುತ್ತಾನೆ? 'ಏನು ಮಾಡ್ತಿಯೋ ಮಗನೆ?' ಅಂತ ಶಾಸಕರಿಗೆ ಕೇಳುತ್ತಾನೆ. ಆಗ ಇಲ್ಲಿ ನಾವು ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ? ಈ ರೀತಿ ಬಸವರಾಜರದ್ದು ಆಯಿತು, ಜಯರಾಮಶೆಟ್ಟರದ್ದು ಆಯಿತು, ಸಭಾಪತಿಗಳದ್ದು ಆಯಿತು, ಮಂಜುನಾಥ ಕುನ್ನೂರದ್ದು ಆಯಿತು, ಅಪ್ಪಚ್ಚುರಂಜನ್ ಅವರದ್ದೂ ಆಯಿತು. ಈ ರೀತಿ ಹತ್ತಾರು ಘಟನೆಗಳು ಏನು ನಡೆದಿವೆ ಇದರಿಂದ ಸರ್ಕಾರಕ್ಕೆ ಶೋಭೆ ತರತಕ್ಕಂಥಾದ್ದು ಅಲ್ಲ. ಅದಕ್ಕೆ ನಾನು ನಿಮಗೆ ಸಲಹೆ ಕೊಡುವಂಥಾದ್ದು ಏನೆಂದರೆ ಇವತ್ತು ಒಣಪ್ರತಿಷ್ಠೆಗೆ ಸರ್ಕಾರ ನಿಲ್ಲುವುದು ಬೇಡ. ಇಲ್ಲೇ ನಾವು ಉತ್ತರ ಕೊಡಬೇಕು ಅಂತ ನಾವು

ಆಗ್ರಹ ಮಾಡುತ್ತಿಲ್ಲ. ಇದು ಒಂದು ವಿಶೇಷ ಸಂದರ್ಭ ಆಗಿರುವುದರಿಂದ ಅಧ್ಯಕ್ಷರು ಸಹ ಕೊಠಡಿಗೆ ಕರೆದು ಮಾತನಾಡಿದರು; ಈ ಅಪ್ಪಚ್ಚು ರಂಜನ್ ಅವರ ವಿಷಯದಲ್ಲಿ, ಮತ್ತೆ ಜಯರಾಮಶೆಟ್ಟರು, ಸಭಾಪತಿಗಳ ವಿಷಯದಲ್ಲಿ ಬಸವರಾಜು ಅವರ ವಿಷಯದಲ್ಲಿ. ಇದುವರೆಗೂ ಏನೂ ಆಗಲಿಲ್ಲ. ಬೇರೆ ಬೇರೆ ಕಾರಣಕ್ಕೋಸ್ಕರ ಇದು ಆಗಿಲ್ಲ. ನಾವು ಕೆಲಸ ಮಾಡಲಿಕ್ಕೆ ಆಗದೇ ಇರುವಂಥ ಉಸಿರುಕಟ್ಟುವ ಪರಿಸ್ಥಿತಿ ಇದೆ. ಆದಕ್ಕೇ, ನಾನು ಹೇಳುವಂಥಾದ್ದು ಈ ನಾಲ್ಕೂದು ಕೇಸುಗಳ ಬಗ್ಗೆ ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ನಾವು ಕೆಲಸ ಮಾಡುವಂಥ ಒಳ್ಳೆಯ ಅವಕಾಶ ಇವತ್ತು ಸಿಗಬೇಕಾಗಿದೆ. ತಪ್ಪಾದರೆ ಯಾರಮೇಲೆ ಬೇಕಾದರೂ ಕ್ರಮ ತೆಗೆದುಕೊಳ್ಳೋಣ. ಆದರೆ ಅಧಿಕಾರಿಗಳು ಈ ರೀತಿ ಪ್ರಾಣಭಯ, ಬೆದರಿಕೆ ಕೊಡುವ ಮಟ್ಟಕ್ಕೆ ಬಂದಿರುವಂಥಾದ್ದು ಈ ಒಂದು ಇತಿಹಾಸದಲ್ಲೇ ನಡೆದಿಲ್ಲ. ಒಬ್ಬ ಜವಾಬ್ದಾರಿಯುತ ಶಾಸಕ ಇಲ್ಲಿ ಇವತ್ತು ಪ್ರಸ್ತಾಪ ಮಾಡಿದ್ದಾರೆ. ಶ್ರೀ ಮಂಜುನಾಥ ಕುನ್ನೂರು ಅವರು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡಿದ್ದಾರೆ. ಇವತ್ತು ಇಲ್ಲಿ ಏಕಾಏಕಿ ಎತ್ತಿದ್ದು ಅಲ್ಲ. ಈ ಪರಿಸ್ಥಿತಿ ಇರಬೇಕಾದರೆ ನಾನು ಕೆಲಸ ಮಾಡುವುದು ಹೇಗೆ ಅಂತ ಕೇಳಿದಾಗ ಇದಕ್ಕಿಂತ ದಾಖಲೆ ಇನ್ನು ಯಾವುದು ಬೇಕು? ಹಾಗಾದರೆ ಈ ಸದನದಲ್ಲಿ ಒಬ್ಬ ಶಾಸಕನಿಗೆ ಜವಾಬ್ದಾರಿ ಇಲ್ಲವೇನು? ಪ್ರತಿಪಕ್ಷದವರೆಲ್ಲರೂ ಇಲ್ಲಿ ತಪ್ಪಾಗುತ್ತದೆ, ಅನ್ಯಾಯವಾಗುತ್ತಿದೆ, ಅಧಿಕಾರಿಗಳು ಉದ್ಧಟತನದಿಂದ ವರ್ತನೆ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುವಾಗ, ನಮಗೇನು ಜವಾಬ್ದಾರಿ ಇಲ್ಲವೇನು? ದಯಮಾಡಿ ಸರ್ಕಾರ ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಿ. ದಯವಿಟ್ಟು ನಾಳೆವರೆಗೆ ಸದನವನ್ನು ಮುಂದೂಡಿ. ಈ ನಾಲ್ಕೂದು ಕೇಸುಗಳ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳುವಂಥ ಆಶ್ವಾಸನೆ ಸಿಗಬೇಕು. ಬೇಕಾದರೆ ಸದನವನ್ನು ಮುಂದೂಡಿ ನಾಳೆ ನೀವು ಕಾರ್ಯಕಲಾಪಗಳನ್ನು ನಡೆಸಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾನು ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಮಂತ್ರಿ) :- ಇದರಲ್ಲಿ ಎರಡು ಮಾತಿಲ್ಲ. ಅವರಿಗೆ ಅಪಮಾನವಾದರೆ ನಿಶ್ಚಿತವಾಗಿ ನಮಗೂ ಅಪಮಾನ ಆದಹಾಗೆ. ನಾವು ಇದನ್ನು ಈ ರೀತಿಯಾಗಿ ತಿಳಿದುಕೊಂಡಿದ್ದೇವೆ. ನಾಳೆ ನಮ್ಮ ಮುಖ್ಯ ಕಾರ್ಯವಾಹಕ ಅಧಿಕಾರಿಯನ್ನು ಕರೆಸಿ ವಿಚಾರಣೆ ಮಾಡಿ ತಕ್ಷಣ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೇವೆಂದು ತಮಗೆ, ಹಾಗೂ ಈ ಸದನಕ್ಕೆ ವರದಿಯನ್ನು ಒಪ್ಪಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಖರ್ಗೆಯವರು ಏನು ಮಾತನಾಡುತ್ತಾರೋ ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈಗಾಗಲೇ ಶ್ರೀ ಮಾನ್ ಶ್ರೀ ರಾಮರೆಡ್ಡಿಯವರು ಮತ್ತು ಯಡಿಯೂರಪ್ಪನವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು :- ಹೀಗೆ ಎಲ್ಲರೂ ಮಾತನಾಡಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈಗ ನಾನು ಹೇಳತಕ್ಕದ್ದು ಇಷ್ಟೆ. ಇವತ್ತು ಒಬ್ಬ ಶಾಸಕನ ಮೇಲೆ ಅವರು ಹಲ್ಲೆ ಮಾಡತಕ್ಕಂಥದ್ದು ಅಥವಾ ಅವರಿಗೆ ಬೆದರಿಕೆ ಹಾಕತಕ್ಕಂಥ ಪ್ರಯತ್ನ ಏನು ಮಾಡಿದ್ದಾರೆ, ಇದು ನಾವೆಲ್ಲರೂ ಕೂಡ ಖಂಡಿಸತಕ್ಕದ್ದು, ಮತ್ತ ಸರ್ಕಾರ ಕೂಡ ಇದನ್ನು ಒಪ್ಪುತ್ತಿದೆ. ಸರ್ಕಾರ ಒಪ್ಪಿದ ಮೇಲೆ ಇದರಲ್ಲಿ ಏನೂ ಉಳಿದಿಲ್ಲ. ನೇರವಾಗಿ ಅವರನ್ನು ಸಸ್ಪೆಂಡ್ ಮಾಡಬೇಕು. ಇದು ಒಂದು. ಇಲ್ಲವೆಂದರೆ ನಮಗೆ ಸಮಯ ಬೇಕು ಎಂದರೆ, ಹೌಸನ್ನು ಅಡ್ಜರ್ನ್ ಮಾಡಿ ನಾಳೆ ಮುಂಜಾನೆ 10 ಗಂಟೆಗೆ ನಾವು ಸೇರೋಣ. ಇಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ವಿಷಯಗಳ ಬಗ್ಗೆ ಅವರು ಹೇಳಿಬಿಡಬೇಕು. ಇಲ್ಲದಿದ್ದರೆ ನಾಳೆ ಮುಂಜಾನೆವರೆಗೆ ಹೌಸ್‌ನ್ನು ಅಡ್ಜರ್ನ್ ಮಾಡಿ ನಾಳೆ ಬಂದು ಎಲ್ಲ ವಿಷಯ ಪ್ರಸ್ತಾಪ ಮಾಡುತ್ತೇನೆ ಎಂದರೆ ಅದನ್ನು ಮಾಡಲಿ. ಏಕೆಂದರೆ ಇದು ಒಬ್ಬರದ್ದು, ಇಬ್ಬರದ್ದು ಅಲ್ಲ. ಒಂದುಕಡೆ ಸಭಾಪತಿಯವರದ್ದು ಆಯಿತು, ಒಂದು ಕಡೆ ಅಪ್ಪಚ್ಚುರಂಜನ್ ಅವರದ್ದು ಆಯಿತು, ಒಂದು ಕಡೆ ಕುನ್ಹೂರು ಅವರದ್ದು ಆಯಿತು. ಈಗ ಎಲ್ಲರದ್ದೂ ಇದೇರೀತಿಯಾಗಿ ನಡೆದರೆ ಸದನದಲ್ಲಿ ಒಬ್ಬರು ಒಬ್ಬರಿಗೆ ಇವತ್ತು ಮುಗಿಸಿಕೊಂಡು ಹೋಗುತ್ತಾರೆ, ಅಧಿಕಾರಿಗಳು ಸುಪ್ರೀಂ ಆಗುತ್ತಾರೆ. ಇವತ್ತು ನಮಗೆ ಬಂದಂಥ ಪರಿಸ್ಥಿತಿ ನಾಳೆ ಆ ಕಡೆಯವರಿಗೂ ಕೂಡ ಬರಬಹುದು. ಸಿಂಧ್ಯ ಅವರು ಹೇಳಿದ ಹಾಗೆ ಅಮೇನು ಶಾಶ್ವತವಾಗಿ ರಾಜ್ಯ ಆಳಲಿಕ್ಕೆ ಗೂಟ ಹೊಡೆದುಕೊಂಡು ಬಂದಿಲ್ಲ. ನಾವು ನೋಡಿದ್ದೇವೆ. ಈ ಕಡೆ ಬಂದವರು ಆ ಕಡೆಗೆ ಹೋಗಿದ್ದಾರೆ, ಆ ಕಡೆಯವರು ಈ ಕಡೆಗೆ ಬಂದಿದ್ದಾರೆ. ಆದ್ದರಿಂದ ಇದನ್ನು ಪ್ರತಿಷ್ಠೆಯ ಇಶ್ಯು ಮಾಡಿಕೊಳ್ಳದೆ ಇದನ್ನು ನಾವು ಮಾಡಿದರೆ ಏನಾಗುತ್ತದೆ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಅಧಿಕಾರಿಗಳಿಗೆ ಕೊನೆಯ ಪಕ್ಷ ಚುರುಕು ಮುಟ್ಟುತ್ತದೆ, ಇನ್ನುಮೇಲಾದರೂ ಕೂಡ ನಾನು ಇಂತಹ ಕೆಲಸ ಮಾಡಬಾರದು ಎನ್ನತಕ್ಕಂಥಾದ್ದು ಆಗುತ್ತದೆ. ಆದ್ದರಿಂದ ದಯವಿಟ್ಟು ಸದನವನ್ನು ಮುಂದೂಡಿಬಿಡಿ.

ಉಪಾಧ್ಯಕ್ಷರು :- ನಾಳೆ ಮುಂಜಾನೆ 10 ಗಂಟೆಗೆ ಸದನವನ್ನು ಮುಂದೂಡಿದ್ದು, ಸ್ಪೀಕರ್ ಅವರ ಚೇಂಬರ್‌ನಲ್ಲಿ ಚರ್ಚೆ ಮಾಡೋಣ. ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಮುಂಜಾನೆ 10 ಗಂಟೆಗೆ ಪುನಃ ಸೇರೋಣ.

(ಸದನವು 5 ಗಂಟೆ 16 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ಒಂದನೇ ಆಗಸ್ಟ್ ಮಾಹೆ 1996 ರ ಗುರುವಾರದಂದು 10 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ, ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು–59